# ಜನತಾವಾಣಿ

ಸಂಪಾದಕರು : ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಡಿಸೆಂಬರ್ 28, 2024

ಸಂಪುಟ : 51 ಸಂಚಿಕೆ : 225 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ಮನಮೋಹನ್ ಸಿಂಗ್‌ಗೆ ಗಣ್ಯರ ನಮನ

### ಇಂದು ಎಐಸಿಸಿ ಕಚೇರಿಯಿಂದ ಅಂತಿಮ ಯಾತ್ರೆ, ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ

ನವದೆಹಲಿ, ಡಿ. 27- ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಜಗದೀಪ್ ದನಕರ್, ಪ್ರಧಾನಮಂತ್ರಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಅಗಲಿದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಅಂತಿಮ ನಮನ ಸಲ್ಲಿಸಿದ್ದಾರೆ.

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ರಾಹುಲ್ ಗಾಂಧಿ ಸೇರಿದಂತೆ ಹಲವು ಗಣ್ಯರು ಹಾಗೂ ಕೇಂದ್ರ ಸಚಿವರು ಮನಮೋಹನ್ ಸಿಂಗ್ ಅವರಿಗೆ ಅಂತಿಮ ನಮನ ಸಲ್ಲಿಸಿದ್ದಾರೆ.

ಸಿಂಗ್ ಅವರ ಮನೆಗೆ ತೆರಳಿ ಅಂತಿಮ ನಮನ ಸಲ್ಲಿಸಿದ ಗಣ್ಯರು, ಎರಡು ಬಾರಿ ಪ್ರಧಾನಿಯಾಗಿದ್ದ ಸಿಂಗ್ ದೇಶಕ್ಕೆ ನೀಡಿರುವ ಕೊಡುಗೆಯನ್ನು ಸ್ಮರಿಸಿದ್ದಾರೆ.

ಕೇಂದ್ರ ಸಂಪುಟ ಸಭೆಯಲ್ಲಿ ಮಾಜಿ ಪ್ರಧಾನಿಗೆ ನಮನ ಹಾಗೂ ಶ್ರದ್ಧಾಂಜಲಿ ಸಲ್ಲಿಸಲಾಗಿದೆ. ಸಿಂಗ್ ಅವರನ್ನು ಗೌರವಿಸಲು ಕೇಂದ್ರ ಸರ್ಕಾರ ಏಳು ದಿನಗಳ ಶೋಕಾಚರಣೆ ಪ್ರಕಟಿಸಿದೆ.

ಸಿಂಗ್ ಅವರ ಕಳೆಬರವನ್ನು ಮೋತಿಲಾಲ್ ನೆಹರು ರಸ್ತೆಯಲ್ಲಿರುವ ಅವರ ನಿವಾಸದಲ್ಲಿ ಇರಿಸಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಪ್ರಧಾನಮಂತ್ರಿ ಸ್ಥಾನದಿಂದ ಹೊರ ಬಂದ ನಂತರ 10 ವರ್ಷಗಳವರೆಗೆ ಸಿಂಗ್ ಇದೇ ನಿವಾಸದಲ್ಲಿ ಇದ್ದರು. ಶನಿವಾರ ಸಕಲ ಸರ್ಕಾರಿ ಗೌರವಗಳೊಂದಿಗೆ ಅವರ ಅಂತ್ಯಕ್ರಿಯೆ ನೆರವೇರಲಿದೆ. ಅಂತಿಮ ಯಾತ್ರೆ ಬೆಳಿಗ್ಗೆ 9.30ಕ್ಕೆ ಎಐಸಿಸಿ ಕೇಂದ್ರ ಕಛೇರಿಯಿಂದ ಆರಂಭವಾಗಲಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

### ಮನಮೋಹನ್ ಸಿಂಗ್ ಮುಂದಿನ ಪೀಳಿಗೆಗೆ ಪಾಠ : ಪ್ರಧಾನಿ ಮೋದಿ

ನವದೆಹಲಿ, ಡಿ. 27- ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಅಗಲಿಕೆ ದೇಶಕ್ಕೆ ಆಗಿರುವ ದೊಡ್ಡ ನಷ್ಟ. ದೇಶದ ಜನತೆ ಹಾಗೂ ದೇಶದ ಅಭಿವೃದ್ಧಿ ಬಗ್ಗೆ ಸಿಂಗ್ ಹೊಂದಿದ್ದ ಬದ್ಧತೆಯನ್ನು ಸದಾ ಗೌರವಿಸಲಾಗುವುದು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ದೇಶ ವಿಭಜನೆಯ ನಂತರ ಸಿಂಗ್ ಅವರ ಕುಟುಂಬ ತಮ್ಮ ಎಲ್ಲವನ್ನೂ ತೊರೆದು ಭಾರತಕ್ಕೆ ವಲಸೆ ಬಂದಿದ್ದನ್ನು ಸ್ಮರಿಸಿರುವ ಪ್ರಧಾನಿ ಮೋದಿ, ಸಿಂಗ್ ಅವರು ಹಲವು ಸಾಧನೆಗಳನ್ನು ಮಾಡಿದ್ದು, ಇದು ಸಾಮಾನ್ಯವಲ್ಲ ಎಂದಿದ್ದಾರೆ.

ಪರಿಶ್ರಮದ ಮೂಲಕ ಪ್ರಗತಿ ಕಂಡು ಯಾವ ರೀತಿ ಸಾಧನೆ ಮಾಡಬಹುದು ಎಂಬುದಕ್ಕೆ ಸಿಂಗ್ ಅವರ ಜೀವನ ಮುಂದಿನ ಪೀಳಿಗೆಗೆ ಉದಾಹರಣೆಯಾಗಲಿದೆ ಎಂದು ಮೋದಿ ತಿಳಿಸಿದ್ದಾರೆ.

ದೇಶ ಸಂಕಷ್ಟ ಎದುರಿಸುತ್ತಿದ್ದ ಸಂದರ್ಭದಲ್ಲಿ ಸಿಂಗ್ ಅವರು ರಿಸರ್ವ್ ಬ್ಯಾಂಕ್ ಗವರ್ನರ್ ಆಗಿ ಕಾರ್ಯ (4ನೇ ಪುಟಕ್ಕೆ)

## 41 ಔಷಧ ಮಾದರಿಗಳು ಪ್ರಮಾಣಿತ ಗುಣಮಟ್ಟದ್ದಲ್ಲ : ಔಷಧ ನಿಯಂತ್ರಕ

ನವದೆಹಲಿ, ಡಿ.27- ರಾಜ್ಯ ಔಷಧ ಪರೀಕ್ಷಾ ಪ್ರಯೋಗಾಲಯಗಳು 70 ಔಷಧ ಮಾದರಿಗಳನ್ನು 'ನಾಟ್ ಆಫ್ ಸ್ಟ್ಯಾಂಡರ್ಡ್ ಕ್ವಾಲಿಟಿ' (ಪ್ರಮಾಣಿತ ಗುಣಮಟ್ಟಲ್ಲ) ಎಂದು ಗುರುತಿಸಿವೆ. ಇದಲ್ಲದೆ, ಎರಡು ಔಷಧ ಮಾದರಿಗಳನ್ನು ನಕಲಿ ಔಷಧಗಳೆಂದು ಗುರುತಿಸಲಾಗಿದೆ.

ನವೆಂಬರ್‌ನಲ್ಲಿ ಕೇಂದ್ರ ಔಷಧ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೊಳಪಡಿಸಿದ 41 ಔಷಧ ಮಾದರಿಗಳು 'ನಾಟ್ ಆಫ್ ಸ್ಟ್ಯಾಂಡರ್ಡ್ ಕ್ವಾಲಿಟಿ' (NSQ) ಎಂದು ಭಾರತದ ಔಷಧ ನಿಯಂತ್ರಕ ಪತ್ತೆ ಮಾಡಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ರಾಜ್ಯ ಔಷಧ ಪರೀಕ್ಷಾ ಪ್ರಯೋಗಾಲಯಗಳು 70 ಔಷಧ ಮಾದರಿಗಳನ್ನು 'ನಾಟ್ ಆಫ್ ಸ್ಟ್ಯಾಂಡರ್ಡ್ ಕ್ವಾಲಿಟಿ' (ಪ್ರಮಾಣಿತ ಗುಣಮಟ್ಟದ್ದಲ್ಲ) ಎಂದು ಗುರುತಿಸಿವೆ. ಇದಲ್ಲದೆ, ಎರಡು ಔಷಧ ಮಾದರಿಗಳನ್ನು ನಕಲಿ ಔಷಧಗಳೆಂದು ಗುರುತಿಸಲಾಗಿದೆ. ಎರಡು ಮಾದರಿಗಳಲ್ಲಿ ಒಂದು ಔಷಧದ ಮಾದರಿಯನ್ನು ಬಿಹಾರ ಡ್ರಗ್ಸ್ ಕಂಟ್ರೋಲ್ ಅಥಾರಿಟಿ ಮತ್ತು ಇನ್ನೊಂದು ಮಾದರಿಯನ್ನು CDSCO (ಉತ್ತರ ವಲಯ), ಗಾಜಿಯಾಬಾದ್‌ನಿಂದ ಆಯ್ಕೆ ಮಾಡಲಾಗಿತ್ತು.

ಇತರ ಕಂಪನಿಗಳ ಒಡೆತನದ ಬ್ರ್ಯಾಂಡ್ ಹೆಸರುಗಳನ್ನು ಬಳಸಿಕೊಂಡು ಅನಧಿಕೃತ ಮತ್ತು ಅಪರಿಚಿತ ತಯಾರಕರು ಔಷಧಗಳನ್ನು ತಯಾರಿಸಿದ್ದಾರೆ. ಈ ವಿಷಯದ ಬಗ್ಗೆ ತನಿಖೆ ಪ್ರಾರಂಭಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಪ್ರಮಾಣಿತ ಗುಣಮಟ್ಟದಲ್ಲದ ಮತ್ತು ನಕಲಿ ಔಷಧಗಳ ಪಟ್ಟಿಯನ್ನು ಪ್ರತಿ ತಿಂಗಳು ಸಿಡಿಎಸ್‌ಸಿಒ ಪೋರ್ಟಲ್‌ನಲ್ಲಿ ಪ್ರದರ್ಶಿಸಲಾಗುತ್ತದೆ ಎಂದು ಸಚಿವಾಲಯ ತಿಳಿಸಿದೆ.

## ಅತಿ ತಾಂತ್ರಿಕ ಆಧಾರದಡಿ ಅತ್ಯಾಚಾರದ ಆರೋಪಿ ಬಿಡುಗಡೆ ಸಲ್ಲದು

ಮುಂಬೈ, ಡಿ. 27- ಅತಿ ತಾಂತ್ರಿಕತೆಯ ಆಧಾರದ ಮೇಲೆ ಅತ್ಯಾಚಾರದ ಆರೋಪಿಯನ್ನು ಬಿಡುಗಡೆ ಮಾಡಲಾಗದು ಎಂದು ಹೇಳಿರುವ ಇಲ್ಲಿನ ಸೆಷನ್ಸ್ ನ್ಯಾಯಾಲಯ, ಅತ್ಯಾಚಾರ ಪ್ರಕರಣದ ಆರೋಪಿ ಚಿತ್ರ ನಿರ್ಮಾಪಕ ಗುಣವಂತ್ ಜೈನ್ ಪೊಲೀಸರ ಎದುರು ಶರಣಾಗಬೇಕು ಎಂದು ತಿಳಿಸಿದೆ.

38 ವರ್ಷದ ರೂಪದರ್ಶಿ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಕಳೆದ ನವೆಂಬರ್ 21ರಂದು ಜೈನ್ ಬಂಧಿಸಲಾಗಿತ್ತು. ಮರುದಿನ ಅಂಧೇರಿಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಎದುರು ಆರೋಪಿಯನ್ನು ಹಾಜರುಪಡಿಸಿದ ಪೊಲೀಸರು, ಆರೋಪಿಯನ್ನು ಐದು ದಿನಗಳ ಕಾಲ ಕಸ್ಟಡಿಗೆ ನೀಡುವಂತೆ ಕೇಳಿದರು.

ಆದರೆ ಜೈನ್ ಬಂಧನದ 4 ನಿಮಿಷಗಳ ನಂತರ ಯಾವ ಆಧಾರದ ಮೇಲೆ ಬಂಧಿಸಲಾಗಿದೆ ಎಂಬುದನ್ನು ಆರೋಪಿಗೆ ತಿಳಿಸಲಾಗಿದೆ. ಇದು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಉಲ್ಲಂಘನೆಯಾಗಿದೆ. ಈ ಹಿನ್ನೆಲೆಯಲ್ಲಿ ಆರೋಪಿಯನ್ನು ಬಿಡುಗಡೆ ಮಾಡುವಂತೆ ಮ್ಯಾಜಿಸ್ಟ್ರೇಟರು ಆದೇಶಿಸಿದ್ದರು.

ಈ ಹಿನ್ನೆಲೆಯಲ್ಲಿ ಪೊಲೀಸರು ಸೆಷನ್ಸ್ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿದ್ದರು. ಅರ್ಜಿಯ ವಿಚಾರಣೆ (4ನೇ ಪುಟಕ್ಕೆ)

## ಉಗ್ರ ದಾಳಿ ನಂತರ ಸೈನಿಕ ಕಾರ್ಯಾಚರಣೆ ಬಗ್ಗೆ ಮಾತನಾಡಿದ್ದ ಮನಮೋಹನ್

ಮುಂಬೈ, ಡಿ. 27- ಭಾರತದ ಮೇಲೆ ಉಗ್ರವಾದಿ ದಾಳಿ ನಡೆದಲ್ಲಿ ಪಾಕಿಸ್ತಾನದ ವಿರುದ್ಧ ಸೈನಿಕ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಮಾಜಿ ಪ್ರಧಾನಿ ಮನ್‌ಮೋಹನ್ ಸಿಂಗ್ ತಿಳಿಸಿದ್ದರು ಎಂದು ಬ್ರಿಟನ್ ಮಾಜಿ ಪ್ರಧಾನಮಂತ್ರಿ ಡೇವಿಡ್ ಕ್ಯಾಮರಾನ್ ಅವರು ತಮ್ಮ ಆತ್ಮ ಚರಿತ್ರೆಯಲ್ಲಿ ತಿಳಿಸಿದ್ದಾರೆ. 2011ರ ಜುಲೈ (4ನೇ ಪುಟಕ್ಕೆ)

**ತುಂತರು ಮಳೆ..**



ದಾವಣಗೆರೆಯಲ್ಲಿ ಚಳಿಯ ವಾತಾವರಣ ಮುಂದುವರೆದಿದ್ದು, ಶುಕ್ರವಾರ ಸಂಜೆ ತುಂತುರು ಮಳೆ ಸುರಿಯಿತು. ಮಳೆಯಲ್ಲಿಯೇ ಬೈಕ್ ಮೇಲೆ ತೆರಳುತ್ತಿರುವುದು.

## ವಿಶೇಷ ಚೇತನರ 5 ಮೀಸಲಾತಿ ಪಾಲನೆ ಕಡ್ಡಾಯವಾಗಲಿ: ಆರತಿ

ದಾವಣಗೆರೆ, ಡಿ.27- ವಿಶೇಷ ಚೇತನರಿಗೆ ಇರುವ ಶೇ.5ರ ಮೀಸಲಾತಿ ಎಲ್ಲಾ ವಲಯದಲ್ಲಿ ಕಡ್ಡಾಯವಾಗಿ ಪಾಲನೆ ಆಗಲಿ ಎಂದು ಹೊಸಪೇಟೆಯ ಸಾಧ್ಯ ಟ್ರಸ್ಟಿನ ಸಂಸ್ಥಾಪಕಿ ಕೆ.ಟಿ. ಆರತಿ ತಿಳಿಸಿದರು.

ಮಾನಸ ಸಾಧನಾ ವಿಕಲಚೇತನರ ಸೇವಾ ಟ್ರಸ್ಟ್ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ವಿಶ್ವ ವಿಕಲಚೇತನರ ದಿನಾಚರಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಕಲ ಚೇತನರಿಗಿರುವ ಮೀಸಲಾತಿ ಹಲವೆಡೆ ದುರ್ಬಳಕೆ ಆಗುತ್ತಿದೆ. ಹಾಗಾಗಿ ಸರ್ಕಾರಿ ಹಾಗೂ ಖಾಸಗಿ ವಲಯ ಸೇರಿದಂತೆ ಪ್ರತಿ ಕ್ಷೇತ್ರದಲ್ಲೂ ಶೇ.5ರ ಮೀಸಲಾತಿ ಪಾಲನೆ ಆದಲ್ಲಿ ಅವರೂ ಸಹ ಸಮಾಜದ ಮುಖ್ಯವಾಹಿನಿಗೆ ಬರಲಿದ್ದಾರೆ ಎಂದರು.

ಸಮಾಜದಲ್ಲಿನ 21 ತರಹದ ವಿಕಲಚೇತನರು ಒಂದೇ ಎಂದು, ಭಾವಿಸಿ ಒಗ್ಗಟ್ಟಿನಿಂದ ಕೆಲಸ ಮಾಡಿದಾಗ ಮಾತ್ರ ಸರ್ಕಾರದ ಗಮನ ಸೆಳೆಯಬಹುದು ಎಂದು ಆಶಯ ವ್ಯಕ್ತಪಡಿಸಿದರು. ವಿಕಲ ಚೇತನರ ಟಾಸ್ಕ್‌ಫೋರ್ಸ್ ಪ್ರತಿ ಜಿಲ್ಲೆ, ತಾಲ್ಲೂಕು ಹಾಗೂ ಪಂಚಾಯತಿ ಮಟ್ಟದಲ್ಲಿ ಇನ್ನೂ ಹೆಚ್ಚಿನದಾಗಿ (4ನೇ ಪುಟಕ್ಕೆ)



ದಾವಣಗೆರೆ ಕುವೆಂಪು ಕನ್ನಡ ಭವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ವಿಶ್ವ ವಿಕಲಚೇತನರ ದಿನಾಚರಣೆ' ಕಾರ್ಯಕ್ರಮದ ವೇಳೆ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.


### ಬಾನಪ್ಪರ ಟಿ.ಹೆಚ್. ಶಂಕ್ರಪ್ಪ ನಿಧನ



ದಾವಣಗೆರೆ ತಾಲ್ಲೂಕು, ತೋಳಹುಣಸೆ ಗ್ರಾಮದ ವಾಸಿ
ದಿ. ಬಾನಪ್ಪರ ಹನುಮಂತಪ್ಪರವರ ಪುತ್ರ
**ಬಾನಪ್ಪರ ಟಿ.ಹೆಚ್. ಶಂಕ್ರಪ್ಪ**
(ವಿ.ಎಸ್.ಎಸ್. ಮಾಜಿ ಅಧ್ಯಕ್ಷರು ತೋಳಹುಣಸೆ)
ಇವರು ದಿನಾಂಕ : 27.12.2024ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ನಿಧನರಾದರು. ಮೃತರಿಗೆ 72 ವರ್ಷ ವಯಸ್ಸಾಗಿತ್ತು.
ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 28.12.2024ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮ ತೋಳಹುಣಸೆ ಅವರ ಜಮೀನಿನಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ : ಮೊ. 87470 36465, 99809 93274


## ಎಫ್‌ಎಆರ್ ಹೆಚ್ಚಳಕ್ಕೆ ಮುಂದಾದ ಮಹಾನಗರ ಪಾಲಿಕೆ

### ಲಂಬವಾಗಿ ಬೆಳೆಯುವತ್ತ ನಗರ, ಕೃಷಿ ಭೂಮಿ ಬಡಾವಣೆಯಾಗುವ ಸಾಧ್ಯತೆ ಇಳಿಕೆ


ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ

ದಾವಣಗೆರೆ: ಬಹಳ ವರ್ಷಗಳ ನಂತರ, 2023ರಲ್ಲಿ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯ ಎಫ್‌ಎಆರ್ ಅನುಪಾತ ಹೆಚ್ಚಿಸಲಾಗಿತ್ತು. ಇದೀಗ ಮತ್ತೆ ಎಫ್‌ಎಆರ್ (ಫ್ಲೋರ್ ಏರಿಯಾ ರೇಷಿಯೋ) ಹೆಚ್ಚಳಕ್ಕೆ ಮಹಾನಗರ ಪಾಲಿಕೆ ಮುಂದಾಗಿದೆ.

ಎಫ್‌ಎಆರ್ ಹೆಚ್ಚಳಕ್ಕೆ ಸ್ಥಳೀಯ ಜನಪ್ರತಿನಿಧಿಗಳು ಒಲವು ತೋರಿದ್ದೇ ಆದಲ್ಲಿ, ಇಷ್ಟು ದಿನ ಕೃಷಿ ಭೂಮಿಯನ್ನು ನುಂಗಿ ಬೆಳೆಯುತ್ತಿದ್ದ ನಗರ ಮುಂದಿನ ದಿನಗಳಲ್ಲಿ ಮೇಲ್ಮುಖವಾಗಿ (ಲಂಬ)ಯೂ ಬೆಳೆಯಲಿದೆ.

ಕಟ್ಟಡಗಳನ್ನು ನಿರ್ಮಿಸಲು ಮಹಾನಗರ ಪಾಲಿಕೆಯಿಂದ ಮಹಡಿ ಪ್ರದೇಶ ಅನುಪಾತ (ಎಫ್‌ಎಆರ್)ದ ಮೇಲೆ ಅನುಮತಿ ನೀಡಲಾಗುತ್ತದೆ. ಎಫ್‌ಎಆರ್ ಅನುಪಾತ ಹೆಚ್ಚಿಸಿ, ನಿವೇಶನದ ವಿಸ್ತೀರ್ಣಕ್ಕೆ ತಕ್ಕಂತೆ ಮಹಡಿ ಎತ್ತರಿಸಲು ಅವಕಾಶ ನೀಡುವುದರಿಂದ ಅಪಾರ್ಟ್‌ಮೆಂಟ್ ವ್ಯವಸ್ಥೆ ಚಾಲ್ತಿಗೆ ಬಂದು, ವಸತಿ ಸಮಸ್ಯೆ ಪರಿಹಾರವಾಗುತ್ತದೆ. ದಾವಣಗೆರೆ ಎಫ್‌ಎಆರ್ ಅನುಪಾತ 3 ಮಾತ್ರ. ಇದು ನಿವೇಶನದ ಮುಂಭಾಗದಲ್ಲಿನ ರಸ್ತೆಗಳ ವಿಸ್ತರ್ಣದ ಮೇಲೆ ಅವಲಂಬಿತವಾಗುತ್ತದೆ.

ನಗರದಲ್ಲಿ ಎಫ್‌ಎಆರ್ ಕಡಿಮೆ ಇದ್ದ ಕಾರಣ ಹೆಚ್ಚು ಮಹಡಿ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ಇರಲಿಲ್ಲ. ನಿಯಮ ಮೀರಿ ಮಹಡಿ ನಿರ್ಮಿಸಿದವರಿಗೆ ಮಹಾನಗರ ಪಾಲಿಕೆ ದುಪ್ಪಟ್ಟು ದಂಡ ವಿಧಿಸುತ್ತಿತ್ತು. ಒಂದು ವೇಳೆ ದಂಡ ಕಟ್ಟದೇ ಇದ್ದರೆ, (2ನೇ ಪುಟಕ್ಕೆ)



ಸಾಂದರ್ಭಿಕ ಚಿತ್ರ

### ಎಫ್‌ಎಆರ್ ಹೆಚ್ಚಳದಿಂದ ಏನು ಉಪಯೋಗ?

- ಎಫ್‌ಆರ್ ಅನುಪಾತ ಹೆಚ್ಚಳವಾದಾಗ ಎತ್ತರದ ಕಟ್ಟಡ ಕಟ್ಟಲು ಅನುಮತಿ ನೀಡಲಾಗುತ್ತದೆ.
- ಇದರಿಂದ ಒಂದು ನಿವೇಶನದಲ್ಲಿ ಹೆಚ್ಚು ಕಟ್ಟಡ ಅಥವಾ ಮನೆಗಳನ್ನು ನಿರ್ಮಿಸಬಹುದು.
- ನಿವೇಶನಗಳ ಕೊರತೆ ನೀಗುತ್ತದೆ. ಕೃಷಿ ಜಮೀನು ಬಡಾವಣೆಗಳಾಗುವುದು ತಪ್ಪುತ್ತದೆ.
- ಮಹಾನಗರ ಪಾಲಿಕೆಯಿಂದ ಮೂಲ ಭೂತ ಸೌಕರ್ಯಗಳನ್ನು ಒದಗಿಸಲು ಸುಲಭವಾಗುತ್ತದೆ.
- ಮಹಾನಗರ ಪಾಲಿಕೆಯ ಆದಾಯವೂ ಹೆಚ್ಚಾಗುತ್ತದೆ.
- ಮುಖ್ಯವಾಗಿ ಜನ ಸಾಮಾನ್ಯರು ದುಪ್ಪಟ್ಟು ತೆರಿಗೆ ಕಟ್ಟುವುದು ತಪ್ಪುತ್ತದೆ.
- ಸಿಟಿ ಮಧ್ಯ ಭಾಗದಲ್ಲಿನ ಬಡಾವಣೆಗಳು ಅಭಿವೃದ್ಧಿಯಾಗಲು ಸಹಕಾರಿಯಾಗುತ್ತದೆ.

### ಏನಿದು ಎಫ್‌ಎಆರ್ ?

ನಿವೇಶನದ ಅಳತೆ ಆಧರಿಸಿ ನಿರ್ಮಿಸಬಹುದಾದ ಕಟ್ಟಡದ ವಿಸ್ತೀರ್ಣ ಮತ್ತು ಅಂತಸ್ತುಗಳ ಪ್ರಮಾಣವೇ ಎಫ್‌ಎಆರ್.

ನಿವೇಶನದ ವಿಸ್ತೀರ್ಣ ಮತ್ತು ಅದರ ಪಕ್ಕದ ಅಥವಾ ಸಮೀಪದ ರಸ್ತೆ ಅಗಲವನ್ನು ಆಧರಿಸಿ ಎಷ್ಟು ಮಹಡಿಗಳ ಕಟ್ಟಡ ನಿರ್ಮಿಸಬಹುದು ಎಂಬುದನ್ನು ಲೆಕ್ಕ ಮಾಡಿ ಅನುಮತಿ ನೀಡಲಾಗುತ್ತದೆ.

ಉದಾಹರಣೆಗೆ ಪ್ರಸ್ತುತ ಎಫ್‌ಎಆರ್ ಅನುಪಾತ 1.5 ಇದೆ ಎಂದರೆ, 1000 ಚದರಡಿ ನಿವೇಶನದಲ್ಲಿ ನೀವು 1500 ಚದರಡಿ ವಿಸ್ತೀರ್ಣದಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಲಾಗುತ್ತದೆ.

### ಎಫ್‌ಎಆರ್ ಅನುಪಾತ 4ಕ್ಕೆ ಹೆಚ್ಚಿಸಲು ತೀರ್ಮಾನ: ರೇಣುಕಾ

ಇತ್ತೀಚೆಗೆ ನಡೆದ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಎಫ್‌ಎಆರ್ ಅನುಪಾ ಹೆಚ್ಚಿಸಲು ಚರ್ಚೆ ನಡೆದಿದ್ದು, 2.5 ರಷ್ಟಿದ್ದ ಅನುಪಾತವನ್ನು 4ಕ್ಕೆ ಹೆಚ್ಚಿಸಲು ಬೈಲಾದಲ್ಲಿ ತಿದ್ದುಪಡಿ ಮಾಡಲಾಗಿದೆ. ಆದರೆ ಅದಕ್ಕೆ ಸರ್ಕಾರ ಅನುಮತಿ ನೀಡಬೇಕಿದೆ ಎನ್ನುತ್ತಾರೆ ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕ.

ಪ್ರಸ್ತುತ ನಿವೇಶನದ ಅಳತೆ, ಮುಂದಿನ ರಸ್ತೆ, ಅದಕ್ಕೆ ತಕ್ಕಂತೆ ಸೆಟ್ ಬ್ಯಾಕ್ ಪರಿಶೀಲಿಸಿ ಜಿ+3 ವರೆಗೆ ಅನುಮೋದನೆ ಕೊಡಲು ಅವಕಾಶವಿದೆ. ನಿಯಮ ಮೀರಿ ಅಕ್ರಮವಾಗಿ ಕಟ್ಟಿದರೆ ಡಬಲ್ ತೆರಿಗೆ ಕಟ್ಟಬೇಕಾಗುತ್ತದೆ.


ಎಫ್‌ಎಆರ್ ಹೆಚ್ಚಳವಾದಾಗ ನಗರ ವರ್ಟಿಕಲ್‌ಆಗಿ ಬೆಳವಣಿಗೆಯಾಗುತ್ತದೆ. ಪಾಲಿಕೆಯಿಂದ ಮೂಲಭೂತ ಸೌಕರ್ಯ ಒದಗಿಸಲು ಸುಲಭವಾಗುತ್ತದೆ ಎನ್ನುತ್ತಾರೆ ಆಯುಕ್ತರು.

### ಅಕ್ರಮ ಕಟ್ಟಡಗಳಿಗೆ ದುಪ್ಪಟ್ಟು ದಂಡ ಜನರಿಗೆ ಹೊರೆ: ಶಿವನಳ್ಳಿ ರಮೇಶ್

ಮಹಾನಗರ ಪಾಲಿಕೆ ಎಪ್‌ಎಆರ್ ಹೆಚ್ಚಳಕ್ಕೆ ಮುಂದಾಗಿರುವುದು ಉತ್ತಮ. 2023ರಲ್ಲಿ ಎಫ್‌ಎಆರ್ ಅನುಪಾತ ಹೆಚ್ಚಿಸಿ, ಪರವಾನಗಿ ನೀಡಲಾಗುತ್ತಿದೆ. ಆದರೆ ಅದಕ್ಕೂ ಮುನ್ನ ಅಂದರೆ ಎಫ್‌ಎಆರ್ ಕಡಿಮೆ ಇದ್ದ ಸಂದರ್ಭದಲ್ಲಿ ನಿಯಮ ಮೀರಿ ಕಟ್ಟಿದ ಕಟ್ಟಡಗಳು ನಗರದಲ್ಲಿ ಹೆಚ್ಚಾಗಿವೆ. ಅವುಗಳಿಗೆ ದುಪ್ಪಟ್ಟು ದಂಡ ವಿಧಿಸುತ್ತಿರುವುದು ನಾಗರಿಕರಿಗೆ ಹೊರೆಯಾಗಿದೆ. ಕಳೆದ ವರ್ಷ ಎಫ್‌ಆರ್ ಹೆಚ್ಚಳವಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚಾಗುವುದರಿಂದ ಎಫ್‌ಎಆರ್ ಮೀರಿದ ಹಳೆಯ ಕಟ್ಟಡಗಳ್ನು ಹೊಸ ನಿಯಮದಡಿ ತಂದು ದಂಡಮುಕ್ತ ಮಾಡಬೇಕಿದೆ ಎಂದು ಪಾಲಿಕೆ ಮಾಜಿ ಸದಸ್ಯ ಶಿವನಹಳ್ಳಿ ರಮೇಶ್ ಒತ್ತಾಯಿಸಿದ್ದಾರೆ.


॥ ಶ್ರೀಶೈಲ ಮಲ್ಲಿಕಾರ್ಜುನ ಪ್ರಸನ್ನ ॥

### ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಜಿ॥ ಹರಿಹರ ತಾ॥ ನಿಟ್ಟೂರು ಗ್ರಾಮದ ವಾಸಿ
ದಿ. ಶ್ರೀಮತಿ ಸುಶೀಲಮ್ಮ ದಿ. ಸಣ್ಣಗೌಡ್ರು ಬಸವಲಿಂಗಪ್ಪ
ಇವರ ಸೊಸೆ ಶ್ರೀಮತಿ ಮಂಜುಳ ರವೀಂದ್ರ
ಇವರು ಮಾಡುವ ವಿಜ್ಞಾಪನೆಗಳು
ಶರಣ ಬಂಧುಗಳೇ,
ದಿನಾಂಕ 18.12.2024ನೇ ಬುಧವಾರ, ಸಂಜೆ 5.10ಕ್ಕೆ
ನನ್ನ ಪೂಜ್ಯಪತಿಯವರಾದ
**ಶರಣ ರವೀಂದ್ರ ಬಿ.ಜಿ.**
(Retd. Assistant Director of Karnataka Land Army Corporation Ltd.)
ಲಿಂಗೈಕ್ಯರಾದ ಪ್ರಯುಕ್ತ ಇವರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ಇಂದು ಮಧ್ಯಾಹ್ನ 12ಕ್ಕೆ ದಾವಣಗೆರೆ ಸಿಟಿ ಎಂ.ಸಿ.ಸಿ. 'ಬಿ' ಬ್ಲಾಕ್‌ನ (ವಾಟರ್ ಟ್ಯಾಂಕ್ ಹತ್ತಿರ) ಸದ್ಯೋಜಾಥ ಮಠದಲ್ಲಿ ನೆರವೇರಿಸಲು ನಿಶ್ಚಯಿಸಿರುತ್ತಾರೆ. ಆದ್ದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು : ಶ್ರೀಮತಿ ಮಂಜುಳಾ ದಿ. ರವೀಂದ್ರ ಇವರ ಕುಟುಂಬ ಸಹೋದರ-ಸಹೋದರಿಯರು, ಮಕ್ಕಳು ಮತ್ತು ಮೊಮ್ಮಕ್ಕಳು
ಸಣ್ಣ ಗೌಡ್ರು ವಂಶಸ್ಥರು ನಿಟ್ಟೂರು ಹಾಗೂ ಬಂಧು-ಮಿತ್ರರು.
98869 64189, 96320 66145
ವಿ.ಸೂ : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೆ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ

# ಹರಿಹರ ಪೌರಾಯುಕ್ತ v/s ಸದಸ್ಯರು

## ಪೌರಾಯುಕ್ತರ ಮೇಲೆ ಸಾಮಾನ್ಯ ಸಭೆಯಲ್ಲಿ ಮುಂದುವರಿದ ಸದಸ್ಯರ ಆಕ್ರೋಶ

## ಎಲ್ಲದಕ್ಕೂ ನಾನೇ ಕಾರಣ ಎಂದು ಹೇಳಿದರೆ ಹೇಗೆ..? ಸುಬ್ರಹ್ಮಣ್ಯ ಶೆಟ್ಟಿ ಪ್ರಶ್ನೆ



ಹರಿಹರ, ಡಿ. 27 - ನಗರಸಭೆ ಪೌರಾಯುಕ್ತರ ವರ್ತನೆ ವಿರೋಧಿಸಿ ಸದಸ್ಯರೊಬ್ಬರು ಹಿಂಬರಹ ಪತ್ರವನ್ನು ಹರಿದು ತೂರಿದರೆ, ಮತ್ತೊಬ್ಬ ಸದಸ್ಯ ಸಭಾಂಗಣದ ನೆಲದ ಮೇಲೆ ಕುಳಿತು ಆಕ್ರೋಶ ವ್ಯಕ್ತಪಡಿಸಿದ ಘಟನೆ ಹರಿಹರ ಅಧಿವೇಶನದಲ್ಲಿ ಘಟಿಸಿದವು.

ನಗರಸಭೆ ಸಭಾಂಗಣದಲ್ಲಿ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಕೆಲವು ಸದಸ್ಯರು ಪೌರಾಯುಕ್ತರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ವಿವಿಧ ಶಾಖೆಗೆ ಬದಲಾವಣೆ ಮಾಡಿರುವ ವಿಚಾರಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹರಿದು ಹಾಕಿದ ಸದಸ್ಯ ದಾದಾಖಲಂದರ್, ಪೌರಾಯುಕ್ತರ ಕಡೆಗೆ ತೂರಿ ಧಿಕ್ಕಾರ ಕೂಗಿದರು.

ಸಾರ್ವಜನಿಕರಿಗೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕಾಗಿ ಪೌರಾಯುಕ್ತರಿಗೆ ತಿಳಿಸಿದರೂ ಸಹ, ಅದಕ್ಕೆ ಉತ್ತರ ನೀಡದೆ ಉದ್ಧಟತನ ತೋರಿದ್ದಾರೆ ಮತ್ತು ಜಿಲ್ಲೆಯ ಯೋಜನಾ ಅಧಿಕಾರಿಗಳು ಸೂಚನೆ ನೀಡಿದ್ದರೂ ಸ್ಪಂದಿಸಿಲ್ಲ ಎಂದು ಹಿರಿಯ ಸದಸ್ಯ ಎ.ವಾಮನಮೂರ್ತಿ ಸಭಾಂಗಣದ ನೆಲದ ಮೇಲೆ ಕುಳಿತು ಆಕ್ರೋಶ ವ್ಯಕ್ತಪಡಿಸಿದರು.

ಸದಸ್ಯ ಶಂಕರ್ ಖಟಾವ್ಕಾರ್ ಮಾತನಾಡಿ, ಪೌರಾಯುಕ್ತರು ಎಸ್.ಎಫ್.ಸಿ. ಮತ್ತು ಜನರಲ್ ಫಂಡ್ ಎಸ್.ಎಪ್.ಸಿ ಸೇರಿದಂತೆ ಇತರೆ ಹಣಕಾಸು ಯೋಜನೆಗಳ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಆದಷ್ಟು ಬೇಗ ಮುಗಿಸಿ ಕಾಮಗಾರಿಯನ್ನು ಪ್ರಾರಂಭಿಸಬೇಕು. ಸಬೂಬು ಹೇಳಿಕೊಂಡು ಈ ಕೆಲಸವನ್ನು ಮುಂದಕ್ಕೆ ಹಾಕುತ್ತಾ ಹೋದರೆ, ಜನರ ಆಕ್ರೋಶಕ್ಕೆ ಒಳಗಾಗಬೇಕಾಗುತ್ತದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಅನೇಕ ಕನ್ನಡ ಪರ ಸಂಘಟನೆಯವರು ಕನ್ನಡ ಭವನ ನಿರ್ಮಾಣಕ್ಕೆ ನಿವೇಶನ ನೀಡುವಂತೆ ಮನವಿಯನ್ನು ಸಲ್ಲಿಸಿದ್ದಾರೆ. ಮುಂದಿನ ಸಭೆಯ ಅಜೆಂಡಾದಲ್ಲಿ ವಿಷಯ ಚರ್ಚೆಗೆ ತಂದು ನಿವೇಶನ ನೀಡಬೇಕು ಇದಕ್ಕೆ ಸರ್ವ ಸದಸ್ಯರ ಒಪ್ಪಿಗೆ ಕೂಡ ಇರುತ್ತದೆ ಎಂದು ಹೇಳಿದರು.

ಸದಸ್ಯ ಮುಜಾಮಿಲ್ ಬಿಲ್ಲು ಮಾತನಾಡಿ, ನಮ್ಮ ವಾರ್ಡಿನಲ್ಲಿ ಅಧಿಕಾರಿಗಳು, ಸಿಬ್ಬಂದಿಗಳು ಮುತುವರ್ಜಿಯಿಂದ ಕೆಲಸವನ್ನು ಮಾಡದೇ ಇರುವುದರಿಂದ ಸಾರ್ವಜನಿಕರ ನಿಂದನೆಗೆ ನಾವು ಗುರಿಯಾಗಿದ್ದೇವೆ. ಇದನ್ನು ಸರಿಪಡಿಸಬೇಕು ಮತ್ತು ಭಾರತ್ ಆಯಿಲ್ ಮಿಲ್ ಕಾಂಪೌಂಡ್ ಬಳಿ ವ್ಯಾಯಾಮ ಶಾಲೆ ಆರಂಭಿಸಬೇಕು ಎಂದು ಹೇಳಿದರು.

ಸದಸ್ಯ ವಸಂತ್ ಮಾತನಾಡಿ, 6 ಕೋಟಿ ರೂಪಾಯಿ ಕಲ್ಯಾಣ ಮಂಟಪದ ಕಂದಾಯ ಬಾಕಿ ಇದ್ದು, ಅದನ್ನು ಏಕೆ ವಸೂಲಿ ಮಾಡುತ್ತಿಲ್ಲ. ಬಡವರು ಸಣ್ಣ ಪುಟ್ಟ ಕಂದಾಯದ ಹಣವನ್ನು ಕಟ್ಟದೇ ಇದ್ದರೆ ಹಗಲು-ರಾತ್ರಿ ಅವರ ಮನೆಗಳಿಗೆ ಓಡಾಡಿ ಕಟ್ಟಿಸಿಕೊಳ್ಳುತ್ತೀರಿ ಎಂದರು. ಅಲ್ಲದೇ ದೂಡ ಕಚೇರಿ ಹರಿಹರದಲ್ಲಿ ಸ್ಥಾಪನೆ ಆಗಿ ಎರಡು ತಿಂಗಳು ಕಳೆದರೂ ಒಂದು ಕಟ್ಟಡದ ಲೈಸೆನ್ಸ್ ಕೂಡಾ ನೀಡದೇ ಇರುವುದರಿಂದ ಕಚೇರಿ ಇದ್ದೂ ಇಲ್ಲದಂತೆ ಆಗಿದೆ ಎಂದು ದೂರಿದರು.

ನಗರದಲ್ಲಿ ಹಿಂದೂ ರುದ್ರಭೂಮಿ ಬಹಳಷ್ಟು ಚಿಕ್ಕದಾಗಿರುತ್ತದೆ. ಶವ ಸಂಸ್ಕಾರಕ್ಕೆ ತೊಂದರೆ ಆಗಿದೆ. ಹಾಗಾಗಿ ರುದ್ರಭೂಮಿಗೆ ಹೆಚ್ಚಿನ ಜಮೀನನ್ನು ನೀಡುವುದಕ್ಕೆ ಮುಂದಾಗಬೇಕು ಮತ್ತು ಕಸವನ್ನು ಸಾಗಿಸುವ ವಾಹನಗಳಿಗೆ ಅಗತ್ಯ ಸಿಬ್ಬಂದಿ ಒದಗಿಸಬೇಕು ಎಂದು ಸದಸ್ಯೆ ರತ್ನ ಡಿ. ಉಜ್ಜೇಶ್ ಒತ್ತಾಯಿಸಿದರು.

ಸದಸ್ಯೆ ಅಶ್ವಿನಿ ಕೃಷ್ಣ ಮಾತನಾಡಿ, ಕಳೆದ 3 ವರ್ಷಗಳಿಂದ ನೀರಿನ ಸಮಸ್ಯೆ ಬಗ್ಗೆ ಸಭೆಯ ಗಮನಕ್ಕೆ ತಂದರೂ ಯಾವುದೇ ಪರಿಹಾರ ಸಿಕ್ಕಿಲ್ಲ ಮತ್ತು ವಿದ್ಯಾರ್ಥಿಗಳ ಸ್ಕಾಲರ್ ಶಿಪ್ ವಿಚಾರಕ್ಕೆ ಸಂಬಂಧಿಸಿದಂತೆ ಎಷ್ಟೆಲ್ಲ ಮನವಿಯನ್ನು ಮಾಡಿಕೊಂಡರೂ ಉಪಯೋಗವಾಗಿಲ್ಲ ಎಂದು ಹೇಳಿದರು.

ಪಿ.ಎನ್ ವಿರೂಪಾಕ್ಷಪ್ಪ ಮತ್ತು ರಜನಿಕಾಂತ್ ಮಾತನಾಡಿ, ಗುತ್ತೂರು ಗ್ರಾಮದಲ್ಲಿ ದಲಿತರಿಗೆ ಅಂತ್ಯಕ್ರಿಯೆ ನಡೆಸಲು ಸ್ಥಳ ಇಲ್ಲವಾಗಿದೆ . ಇತ್ತೀಚೆಗೆ ಮಳೆ ಬಂದಾಗ ನೀರಿನಲ್ಲಿ ಹೋಗಿ ಅಂತ್ಯಸಂಸ್ಕಾರ ಮಾಡಿ ರಾಜ್ಯದಾದ್ಯಂತ ಸುದ್ದಿ ಹರಡಿತ್ತು. ಹಾಗಾಗಿ ಸ್ಮಶಾನಕ್ಕೆ ಎರಡು ಎಕರೆ ಜಮೀನನ್ನು ನೀಡುವಂತೆ ಆಗ್ರಹಿಸಿದರು.

ಸದಸ್ಯ ದಿನೇಶ್ ಬಾಬು ಮಾತನಾಡಿ, ನಗರದ ಹಳ್ಳದಕೇರಿ ಬಡಾವಣೆಯ ವಾಲ್ಮೀಕಿ ಭವನಕ್ಕೆ ಅನುದಾನ ಬಿಡುಗಡೆ ಮಾಡುವಂತೆ ಹೇಳಿದರು.

ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಮಾತನಾಡಿ, ಎಲ್ಲದಕ್ಕೂ ಪೌರಾಯುಕ್ತರೇ ಕಾರಣ ಎಂದು ಹೇಳಿದರೆ ಹೇಗೆ, ನಾನು ಟೆಂಡರ್ ಸಮಸ್ಯೆಯನ್ನು ನಿಭಾಯಿಸಲು ಮುಂದಾಗಿರುವೆ. ಆದರೆ ನಮಗೆ ಒಂದಿಷ್ಟು ತೊಡಕುಗಳು ಎದುರಾದವು. ಈಗ ನಾನು ಮತ್ತು ಅಧ್ಯಕ್ಷರು ಸೇರಿ ನಗರದ ಅಭಿವೃದ್ಧಿಗೆ ಹೆಚ್ಚಿನ ಮಹತ್ವವನ್ನು ನೀಡುವುದಾಗಿ ಹೇಳಿದರು.

ನಗರಸಭೆ ಅಧಿಕಾರಿ ಲಕ್ಷ್ಮಣ ಮಾತನಾಡಿ, ವಿದ್ಯಾರ್ಥಿಗಳ ಸ್ಕಾಲರ್‌ಶಿಪ್‌ನ 400 ಅರ್ಜಿಗಳು ವಿಲೇವಾರಿ ಆಗದೆ ಇರುತ್ತವೆ. ಈಗ ಸರ್ಕಾರದ ಸುತ್ತೋಲೆ ಬಂದಿದ್ದು, ಆದಷ್ಟು ಬೇಗ ವಿಲೇವಾರಿ ಮಾಡಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಗುತ್ತೂರು ಜಂಬಣ್ಣ, ಸದಸ್ಯರಾದ ಕೆ.ಜಿ. ಸಿದ್ದೇಶ್, ಆರ್.ಸಿ ಜಾವೇದ್, ಹನುಮಂತಪ್ಪ, ನಿಂಬಕ್ಕ ಚಂದಪೂರ್, ಲಕ್ಷ್ಮೀ ಮೋಹನ್, ಶಾಹಿನಾಬಾನು, ಶಹಜಾದ್ , ಬಿ.ಅಲ್ತಾಫ್, ಎಂ.ಎಸ್. ಬಾಬುಲಾಲ್, ಸುಮಿತ್ರಮ್ಮ, ನಾಗರತ್ನ, ಅಬ್ದುಲ್ ಅಲಿಂ, ನಾಮನಿರ್ದೇಶನ ಸದಸ್ಯರಾದ ಕೆ.ಬಿ. ರಾಜಶೇಖರ, ಸಂತೋಷ ದೊಡ್ಡಮನಿ, ದಿವಾಕರ್, ನಗರಸಭೆ ಎಇಇ ನವೀನ್‌ಕುಮಾರ್, ಮ್ಯಾನೇಜರ್ ನಿರಂಜನಿ ಇತರರು ಹಾಜರಿದ್ದರು.

# ಗುತ್ತೂರು ರಾಮಕೃಷ್ಣ ಶಾಲೆಯಲ್ಲಿ ಕಲೋತ್ಸವ



ಹರಿಹರ, ಡಿ. 27 - ಗುತ್ತೂರು ಕಾಲೋನಿಯಲ್ಲಿರುವ ಶ್ರೀ ರಾಮಕೃಷ್ಣ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಮಕ್ಕಳ ಕಲೋತ್ಸವ ಹಾಗೂ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವು ನಡೆಯಿತು.

ವಿಜಯ ಕಿರಣ್ ಟ್ರಾನ್ಸ್ ಪೋರ್ಟ್‌ನ ಮಾಲೀಕರು ಹಾಗೂ ಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ವಿಜಯಕುಮಾರ್, ಕಿರಣ್ ಕುಮಾರ್ ಹಾಗೂ ಕ್ಷೇತ್ರ ಸಂಪನ್ಮೂಲ ಕೇಂದ್ರದ ರಾಜನಹಳ್ಳಿಯ ಸಿಆರ್‌ಪಿಯ ವರಾದ ಶ್ರೀಧರ ಚೆನ್ನಕೇಶವ ಕಟ್ಟಿ, ನಿರ್ದೇಶಕಿ ಶ್ರೀಮತಿ ಸಹನಾ ವಿಜಯಕುಮಾರ್, ಸ್ನೇಹಕಿರಣ್ ಕುಮಾರ್, ಶಶಿಧರ್, ವಿಜಯರಾಘವೇಂದ್ರರವರು ಸಸಿಗೆ ನೀರನ್ನು ಹಾಕುವುದರೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪ್ರತಿಯೊಂದು ಮಕ್ಕಳಿಗೂ ಕೂಡ ತಮ್ಮದೇ ಆದ ವಿಶೇಷ ಪ್ರತಿಭೆ, ಧೈರ್ಯ ಇದ್ದೇ ಇರುತ್ತದೆ. ಅಂತಹ ಪ್ರತಿಭೆಯನ್ನು ಹೊರ ತರುವಂತಹ ಕೆಲಸ ಈ ಶಾಲೆ ಮಾಡುತ್ತಿದೆ ಎಂದು ರಾಜನಹಳ್ಳಿಯ ಸಿಆರ್‌ಪಿ ಶ್ರೀಧರ ಚೆನ್ನಕೇಶವ ಕಟ್ಟಿ ತಿಳಿಸಿದರು.

ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯ ಉದಯ್ ಕುಮಾರ್, ಸಹ ಶಿಕ್ಷಕಿಯರಾದ ಶಾರದಾ ಕನ್ಯಾಳ್, ಶಶಿಕಲಾ ಜಿ.ವಿ, ಸೌಮ್ಯ, ಹೇಮಾವತಿ .ಎಲ್. ರಮಾ, ಶಿಲ್ಪ, ಕೃಷ್ಣಪ್ಪ, ರಶ್ಮಿ, ಶ್ವೇತಾ, ಕಾವ್ಯ, ಶಶಿಕಲಾ .ಆರ್. ಅನುಷಾ, ಸಿಬ್ಬಂದಿಯವರಾದ ಆಕಾಶ್, ಅನುರಾಜ್, ಮಹೇಶ್, ಶೋಭಾ, ವೀಣಾ, ಕಿರಣ್, ವೀಣಾಶ್ರೀ, ಹಾಗೂ ಇತರರು ಭಾಗವಹಿಸಿದ್ದರು.

# ಜಿಗಳಿಯಲ್ಲಿ ಸಂಭ್ರಮದ ಮೆರವಣಿಗೆ, ಗುಗ್ಗಳ



ಮಲೇಬೆನ್ನೂರು, ಡಿ. 27- ಜಿಗಳಿ ಗ್ರಾಮದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಅಂತರಹಳ್ಳಿಯ ಶ್ರೀ ವೀರಭದ್ರೇಶ್ವರ ಸ್ವಾಮಿಯ ಗುಗ್ಗಳ ಅಂಗವಾಗಿ ಗುರುವಾರ ಸಂಜೆ ಗ್ರಾಮದಲ್ಲಿ ಕುಂದಾಪುರದ ಶ್ರೀ ಶನೇಶ್ವರ ಚಂಡೆ ಕಲಾ ತಂಡದೊಂದಿಗೆ ಮೆರವಣಿಗೆ ಮಾಡಲಾಯಿತು.

ಗ್ರಾಮದ ಶ್ರೀಮತಿ ಮೈತ್ರಾದೇವಿ, ನಂದಿಗುಡಿ ರುದ್ರಗೌಡ ಮತ್ತು ಕುಟುಂಬದವರಿಂದ ಶುಕ್ರವಾರ ಬೆಳಿಗ್ಗೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ಗುಗ್ಗಳ ಕಾರ್ಯಕ್ರಮವು ಶ್ರದ್ಧಾ ಭಕ್ತಿಯಿಂದ ನಡೆಯಿತು. ವೀರಭದ್ರೇಶ್ವರ ಸ್ವಾಮಿಯ ಮೆರವಣಿಗೆಗೆ ಚಂಡೆ ಕಲಾವಿದರು ತಮ್ಮ ಕಲೆಯ ಮೂಲಕ ಮೆರಗು ತಂದರು.

# ಈಶ್ವರಮ್ಮ ಶಾಲೆ ವಾರ್ಷಿಕೋತ್ಸವ ಮುಂದೂಡಿಕೆ


ದಾವಣಗೆರೆ, ಡಿ. 27 - ನಗರದ ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತ ಪ್ರೌಢ ಶಾಲೆಯಲ್ಲಿ ಇಂದು ನಡೆಸಲು ಉದ್ದೇಶಿಸಿದ್ದ ಶಾಲಾ ವಾರ್ಷಿಕ ಸಂಭ್ರಮ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಮುಂದೂಡಲಾಗಿದೆ ಎಂದು ಪ್ರಾಂಶುಪಾಲ ಕೆ.ಎಸ್. ಪ್ರಭುಕುಮಾರ್ ತಿಳಿಸಿದ್ದಾರೆ.

# ರಾಣೇಬೆನ್ನೂರು : ಇನ್ಫೋಸಿಸ್ ಕಂಪನಿಗೆ ಆಯ್ಕೆ



ರಾಣೇಬೆನ್ನೂರು, ಡಿ. 27 - ಇಲ್ಲಿನ ಶ್ರೀ ತರಳಬಾಳು ಜಗದ್ಗುರು ತಾಂತ್ರಿಕ ಮಹಾ ವಿದ್ಯಾಲಯದ ಭಾವನಾ ಬೆನ್ನೂರ್ ಕ್ಯಾಂಪಸ್ ಸಂದರ್ಶನದಲ್ಲಿ ಬೆಂಗಳೂರಿನ ಇನ್ಫೋಸಿಸ್ ಕಂಪನಿಗೆ ಕೊನೆಯ ಸುತ್ತಿನಲ್ಲಿ ಆಯ್ಕೆಯಾಗಿದ್ದಾರೆ.

# ಇಂದು ಬಿದ್ದಹನುಮಪ್ಪನ ಮಟ್ಟಿ ವೀರಾಂಜನೇಯ ಸ್ವಾಮಿಯ ಕಾರ್ತಿಕೋತ್ಸವ



ಹರಪನಹಳ್ಳಿ ತಾಲ್ಲೂಕಿನ ಕಂಚಿಕೆರೆ-ಅರಸಿಕೆರೆ ರಸ್ತೆಯಲ್ಲಿ ಬರುವ ಶ್ರೀಕ್ಷೇತ್ರ ಬಿದ್ದಹನುಮಪ್ಪನ ಮಟ್ಟಿ ಶ್ರೀ ವೀರಾಂಜನೇಯ ಮಹಾಸ್ವಾಮಿಯ ಕಾರ್ತಿಕೋತ್ಸವವು ಇಂದು ಸಂಜೆ ಜರುಗುವುದು ಎಂದು ಬಸವರಾಜ ಗುರೂಜಿ ತಿಳಿಸಿದ್ದಾರೆ.

# ಎಫ್‌ಎಆರ್ ಹೆಚ್ಚಳಕ್ಕೆ ಮುಂದಾದ ಮಹಾನಗರ ಪಾಲಿಕೆ

(1ನೇ ಪುಟದಿಂದ) ಶೇ.2ರಷ್ಟು ಬಡ್ಡಿ ಬೀಳುತ್ತಿತ್ತು. ಇದೀಗ ಎಫ್‌ಎಆರ್ ಅನುಪಾತ ಮತ್ತಷ್ಟು ಹೆಚ್ಚಳವಾದರೆ ಮಹಡಿ ಕಟ್ಟಡಗಳ ಸಂಖ್ಯೆ ಅಧಿಕೃತವಾಗಿಯೇ ಹೆಚ್ಚಾಗಲಿದೆ.

ದಾವಣಗೆರೆಯಲ್ಲೇನು ದೊಡ್ಡ ಕೈಗಾರಿಕೆಗಳು, ಐಟಿಬಿಟಿ ಕಂಪನಿಗಳಿಲ್ಲ. ಇರುವುದು ಬಹುತೇಕ ಅಂದರೆ ಶೇ.70ರಷ್ಟು ಮಧ್ಯಮ ವರ್ಗದ ಜನರೇ.

ಸಾಲ ಮಾಡಿ ಮನೆ ಕಟ್ಟುವ ಮೂಲಕ ಜೀವನದ ಬಹುದೊಡ್ಡ ಆಸೆಯೊಂದನ್ನು ಪೂರೈಸಿಕೊಳ್ಳುವವರೇ ಹೆಚ್ಚು. ಮನೆ ಕಟ್ಟುವವರು ಎರಡು ಅಥವಾ ಮೂರು ಅಂತಸ್ಥಿನ ಮನೆ ಕಟ್ಟಿ, ಅದರಿಂದ ಬಾಡಿಗೆ ನಿರೀಕ್ಷಿಸುತ್ತಾರೆ. ಅದರಿಂದ ಸಾಲ ತೀರಿಸಬಹುದೆಂಬ ಅಥವಾ ಆದಾಯ ಹೆಚ್ಚಿಸಿಕೊಳ್ಳಬೇಕೆಂಬ ಉದ್ದೇಶ ಹೊಂದಿರುತ್ತಾರೆ. ಆದರೆ ಎಫ್‌ಎಆರ್ ಅನುಪಾತ ಕಡಿಮೆ ಇರುವುದರಿಂದ ಎತ್ತರಕ್ಕೆ ಕಟ್ಟಿದಷ್ಟೂ ಅದು ಅಕ್ರಮವಾಗುತ್ತದೆ. ಅದಕ್ಕೆ ಪಾಲಿಕೆಗೆ ದುಪ್ಪಟ್ಟು ತೆರಿಗೆ ನೀಡಬೇಕಾಗುತ್ತದೆ.

ದುಪ್ಪಟ್ಟು ತೆರಿಗೆ ಲೂಟಿ ಮಾಡುವ ಬದಲು ಎಫ್‌ಎಅರ್ ಅನುಪಾತ ಹೆಚ್ಚಿಸಿ ಕಾನೂನು ಪ್ರಕಾರ ಕಂದಾಯ ವಸೂಲಿ ಮಾಡುವುದು ಸೂಕ್ತ ಎಂಬುದು ಸಾರ್ವಜನಿಕರ ಒತ್ತಾಸೆಯಾಗಿತ್ತು.

> **ಬೆಂಗಳೂರು ಮಾದರಿಯಲ್ಲಿಯೇ ದಾವಣಗೆರೆ ನಗರವೂ ಅತಿ ವೇಗದಲ್ಲಿ ಬೆಳೆಯುತ್ತಿದೆ. ಎಫ್‌ಎಆರ್ ದರ ಹೆಚ್ಚಳವಾದರೆ ನಗರ ಲಂಬವಾಗಿ ಬೆಳೆಯಲು ಸಾಧ್ಯವಾಗುತ್ತದೆ.**
> **- ಕೆ.ಪ್ರಸನ್ನಕುಮಾರ್, ಪಾಲಿಕೆ ವಿಪಕ್ಷ ನಾಯಕ.**

> **ಎಫ್‌ಎಆರ್ ಹೆಚ್ಚಿಸಿ ಸರ್ಕಾರದಿಂದ ಅನುಮತಿ ದೊರೆತಿದೆ. ರಸ್ತೆಯ ಅಗಲ, ಸೆಟ್ ಬ್ಯಾಕ್ ಪರಿಶೀಲಿಸಿ ಗರಿಷ್ಠ 6 ಫ್ಲೋರ್ ಕಟ್ಟಲು ಪರವಾನಗಿ ನೀಡಲಾಗುವುದು.**
> **- ಕೆ.ಚಮನ್ ಸಾಬ್, ಮೇಯರ್, ಮಹಾನಗರ ಪಾಲಿಕೆ.**

## ಮನಮೋಹನ್ ಸಿಂಗ್ ನಿಧನಕ್ಕೆ ನಸೀರ್ ಸಂತಾಪ

ದಾವಣಗೆರ, ಡಿ. 27 - ಮಾಜಿ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಅವರ ನಿಧನಕ್ಕೆ ಬಿಜೆಪಿ ಮುಖಂಡ ನಸೀರ್ ಅಹ್ಮದ್ ತೀವ್ರ ಸಂತಾಪ ಸೂಚಿಸಿದ್ದಾರೆ.

ಮನಮೋಹನಸಿಂಗ್ ಅವರು ಚಿಂತಕರು, ವಿದ್ವಾಂಸಕರು ಹಾಗೂ ನಿಗರ್ವಿಗಳು ಆಗಿದ್ದರು. ಇವರು ತಮ್ಮ ಶೈಕ್ಷಣಿಕ ಮತ್ತು ಕರ್ತವ್ಯ ಎರಡರಲ್ಲೂ ಶ್ರದ್ಧೆ ಹಾಗೂ ವಿನೀತ ಭಾವನೆಯಿಂದ ಗೌರವಕ್ಕೆ ಪಾತ್ರರಾಗಿದ್ದಾರೆ. ಡಾ. ಮನಮೋಹನ್ ಸಿಂಗ್ ಅವರು ಆರ್ಥಿಕತೆಯನ್ನು ಪರಿವರ್ತಿಸುವ ವ್ಯಾಪಕ ಸುಧಾರಣೆಗಳನ್ನು ತಂದವರು. ಯುಪಿಎ ಎರಡು ಅವಧಿಯ ಪ್ರಧಾನಿಯಾಗಿ ಸಲ್ಲಿಸಿದ್ದ ಸೇವೆಯನ್ನು ನಸೀರ್ ಅಹ್ಮದ್ ಕೊಂಡಾಡಿದ್ದಾರೆ.

## ನಗರದಲ್ಲಿ ಓಶೋ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಓಶೋ ಧ್ಯಾನ ಶಿಬಿರವನ್ನು ಇಂದು ಮತ್ತ ನಾಳೆ ಬೆಳಿಗ್ಗೆ 6 ರಿಂದ 7.30ರವರೆಗೆ ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಏರ್ಪಡಿಸಲಾಗಿದೆ ಎಂದು ಅರ್ಚನ (97385 72318), ಪುಷ್ಪ (90367 19573) ತಿಳಿಸಿದ್ದಾರೆ.

# ಬಂಗಾರದ ಜೋಡಿ ಮುಂದೂಡಿಕೆ

ದಾವಣಗೆರೆ, ಡಿ. 27 - ಸಿರಿ ಕನ್ನಡ ವಾಹಿನಿ ಸಹಯೋಗದಲ್ಲಿ ನಾಳೆ ದಿನಾಂಕ 28, ಹಾಗೂ 29 ರಂದು ಹಮ್ಮಿಕೊಂಡಿದ್ದ ಸರ್ವಾಭಿವೃದ್ಧಿ ಹೋಮ, ಚಿತ್ರಕಲೆ, ಆಡುಗೆ ಸ್ಪರ್ಧೆ ಸೇರಿದಂತೆ ಬಂಗಾರದ ಜೋಡಿ ಕಾರ್ಯಕ್ರಮವನ್ನು ಜನವರಿ 19 ಕ್ಕೆ ಮುಂದೂಡಲಾಗಿದೆ ಎಂದು ಸಂಸ್ಥೆ ತಿಳಿಸಿದೆ.

# ಹರಿಹರದಲ್ಲಿ ಶ್ರೀ ವಿಠ್ಠಲ ರುಕ್ಮಿಣಿ ದಿಂಡಿ ಉತ್ಸವ



ಹರಿಹರ, ಡಿ. 27- ನಗರದ ಶ್ರೀ ವಿಠ್ಠಲ ರುಕ್ಮಿಣಿ ದೇವಸ್ಥಾನದಲ್ಲಿ ಇಂದು ದಿಂಡಿ ಉತ್ಸವ ಕಾರ್ಯಕ್ರಮ ಶ್ರದ್ಧಾ ಭಕ್ತಿಯಿಂದ ನಡೆಯಿತು.

ಬೆಳಗಿನ ಜಾವ ದೇವರಿಗೆ ವಿಶೇಷ ಪೂಜೆ ನಂತರ ಶ್ರೀ ವಿಠ್ಠಲ ರುಕ್ಮಿಣಿ ದೇವರ ದಿಂಡಿ ಉತ್ಸವದ ಮೆರವಣಿಗೆ ಆರಂಭಗೊಂಡು, ನಗರದ ರಾಜ ಬೀದಿಗಳಲ್ಲಿ ಸಂಚರಿಸಿ ಪುನಃ ದೇವಸ್ಥಾನಕ್ಕೆ ಆಗಮಿಸಿತು. ನಂತರ ಶ್ರೀ ಸಂತ ಪೂಜಾ ಹಾಗೂ ಮಹಾ ಮಂಗಳಾರತಿ ನೆರವೇರಿತು.

ಈ ಸಂದರ್ಭದಲ್ಲಿ ಶ್ರೀ ಜಗನ್ನಾಥರಾವ್ ಬೊಂಗಾಳೆ, ಎಸ್.ಎಸ್.ಕೆ ಸಮಾಜದ ಮುಖಂಡರಾದ ಕೃಷ್ಣ ಸಾ ಭೂತೆ, ಅಂಬಾ ಮೆಹರ್ವಾಡೆ, ಡಾ. ಮೋಹನ್ ಮೆಹರ್ವಾಡೆ, ಕೃಷ್ಣ ಸಾ ಲದ್ವಾ, ಹಂಗಾಮಿ ಅಧ್ಯಕ್ಷ ಮೋಹನ್ ಎನ್. ಖಿರೋಜಿ, ಉಪಾಧ್ಯಕ್ಷ ಪರುಶುರಾಮ್ ಕಾಟ್ವೆ, ಖಜಾಂಚಿ ತುಳಜಪ್ಪ ಭೂತೆ, ಶ್ರೀನಿವಾಸ್ ಮೆಹರ್ವಾಡೆ, ಶೀಕಾಂತ ಮೆಹರ್ವಾಡೆ, ರಾಘವೇಂದ್ರ ಭೂತೆ , ಆಶೋಕ ಭೂತೆ, ರಮೇಶ್ ಕಾಟ್ವೆ, ವಿನಾಯಕ ಲದ್ವಾ, ಕೃಷ್ಣ ಪಿ.ರಾಜೊಳ್ಳಿ, ದುರ್ಗಾಸಾ ಕಾಟ್ವೆ, , ವಿಠ್ಠಲ ಮೆಹರ್ವಾಡೆ, ಪಾಂಡು ಭೂತೆ, ನವೀನ್ ಲದ್ವಾ, ಯಲ್ಲಪ್ಪ, ವಿಶ್ವನಾಥ್ ಬದಿ, ಗಣಪತಿ ಸಾ. ಖಿರೋಜಿ, ವಾಸು ಮೆಹರ್ವಾಡೆ, ಪ್ರವೀಣ್ ಪೊಪವರ್, ಮಂಜುನಾಥ್ ಮೆಹರ್ವಾಡೆ, ಮೋತಿರಾಜ್ ಖಿರೋಜಿ, ಪರುಶುರಾಮ್ ಅಂಬೇಕರ್, ಮೋಹನ್ ಸಾ, ಮೈಲಾರಲಿಂಗ ಸಾ, ಶ್ರೀಪಾದ ಕಾಟ್ವೆ, ಜಯಲಕ್ಷ್ಮಿ, ಅಂಬುಜಾಬಾಯಿ ಪಿ. ರಾಜೊಳ್ಳಿ, ಶೋಭಾಬಾಯಿ ಭೂತೆ, ರೂಪಾ ತುಳಜಪ್ಪ ಭೂತೆ, ಜ್ಯೋತಿ ಮೋಹನ ಖಿರೋಜಿ, ಸರೋಜಬಾಯಿ ಲದ್ವಾ ಇತರರು ಹಾಜರಿದ್ದರು.

# ಅಡಿಕೆ ವರ್ತಕರಿಂದ ಮನಮೋಹನ್ ಸಿಂಗ್‌ಗೆ ಶ್ರದ್ಧಾಂಜಲಿ



ದಾವಣಗೆರೆ, ಡಿ. 27- ನಗರದ ಅಡಿಕೆ ವರ್ತಕರಿಂದ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಟ್ರೇಡರ್ಸ್ ಅಡಿಕೆ ಅಂಗಡಿಯಲ್ಲಿ ಆರ್ಥಿಕ ಸುಧಾರಣೆಯ ಹರಿಕಾರ ಮಾಜಿ ಪ್ರಧಾನ ಮಂತ್ರಿ ಡಾ. ಮನಮೋಹನ್ ಸಿಂಗ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

1990ರಲ್ಲಿ ಆರ್ಥಿಕ ಸುಧಾರಣೆಗಳು, ಉದಾರೀಕರಣ ನೀತಿಗಳನ್ನು ಜಾರಿಗೆ ತರುವ ಮೂಲಕ ಭಾರತದ ಅರ್ಥ ವ್ಯವಸ್ಥೆಗೆ ಹೊಸ ದಿಕ್ಕು ತೋರಿಸಿದ ಕೀರ್ತಿ ಮನಮೋಹನ್ ಸಿಂಗ್ ಅವರಿಗೆ ಸಲ್ಲುತ್ತದೆ ಎಂದು ಈ ಸಂದರ್ಭದಲ್ಲಿ ರಾಮಗೊಂಡನಹಳ್ಳಿ ಬಸವರಾಜ್ ತಿಳಿಸಿದರು.

ಈ ಸಂದರ್ಭದಲ್ಲಿ ಕುಕ್ಕುವಾಡದ ಸುರೇಂದ್ರಪ್ಪ, ಬನಶಂಕರಿ ಸದಾನಂದ, ರಾಮಗೊಂಡನಹಳ್ಳಿ ಜಯಣ್ಣ, ಲೋಕಿಕೆರೆ ರವಿಯಣ್ಣ, ಬಾಡದ ಸೋಮಶೇಖರಪ್ಪ, ಬೆಳ್ಳುಳ್ಳಿ ಗುರುಸ್ವಾಮಿ, ಎಸ್.ಎನ್.ಟಿ. ತಿಪ್ಪೇಸ್ವಾಮಿ, ಹೊನ್ನೂರು ಸಂಕಪ್ಪ, ತೊಗಲೇರಿ ಮುರುಗೇಶ್, ವಿಠಲಾಪುರದ ಕಿರಣ್, ಎಂ. ಷಡಕ್ಷರಪ್ಪ ಬೇತೂರು, ಯಲವಟ್ಟಿ ಅಣ್ಣಪ್ಪ, ನಂದಿ, ಸತೀಶ್, ಬನಶಂಕರಿ ಬಸವರಾಜ್, ಇತರರು ಸೇರಿ ಸಿಂಗ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

# ನಗರದಲ್ಲಿ ವಿದ್ಯುತ್ ಮಾರ್ಗದ ಸಮೀಪ ಗಾಳಿಪಟ ಹಾರಿಸುವಂತಿಲ್ಲ

ಹರಿಹರ, ಡಿ. 27- ನಗರದಲ್ಲಿನ ಗಾಳಿಪಟ ಹಾರಿಸುವುದರಿಂದ ವಿದ್ಯುತ್ ತಂತಿಗಳಲ್ಲಿ ಪಟದ ದಾರ ಸುತ್ತಿಕೊಂಡು ವಿದ್ಯುತ್ ಕಡಿತ ಹಾಗೂ ಅಪಘಾತಗಳು ಸಂಭವಿಸಿವೆ. ಆದ್ದರಿಂದ ಇಲಾಖೆಯ ವಿದ್ಯುತ್ ಮಾರ್ಗದ ಸಮೀಪ ಯಾರೂ ಗಾಳಿಪಟ ಹಾರಿಸ ಬಾರದು ಎಂದು ಬೆ.ವಿ.ಕಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸಿ. ನಾಗರಾಜ್ ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ವಿದ್ಯುತ್ ವ್ಯತ್ಯಯ ಮುಂದೂಡಿಕೆ

ಯರಗುಂಟೆ, ಅತ್ತೀಗೆರೆ, ಮೇಳ್ಳೆಕಟ್ಟೆ ಮತ್ತು ಕಾಡಜ್ಜಿ ವಿದ್ಯುತ್ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯವನ್ನು ಹಮ್ಮಿಕೊಂಡಿದ್ದು ಕಾರಣಾಂತರಗಳಿಂದ ತ್ರೈಮಾಸಿಕ ನಿರ್ವಹಣಾ ಕಾರ್ಯವನ್ನು ಮುಂದುಡಲಾಗಿದೆ.


## ನಾಗೂರು ವಿರೂಪಾಕ್ಷಪ್ಪ ರಾಮಶೆಟ್ಟಿ ನಿಧನ



ದಾವಣಗೆರೆ ಸಿಟಿ ಇಡಬ್ಲ್ಯೂಎಸ್ ಕಾಲೋನಿ ವಾಸಿಗಳಾದ ನಾಗೂರು ಶ್ರೀ ವಿರೂಪಾಕ್ಷಪ್ಪ ರಾಮಶೆಟ್ಟಿ (98) ಇವರು ದಿನಾಂಕ 27.12.2024ನೇ ಶುಕ್ರವಾರ ಬೆಳಿಗ್ಗೆ 11ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.12.2024ರ ಶುಕ್ರವಾರ ರಾತ್ರಿ 9 ಗಂಟೆಗೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಿತು.

# ದೇಶದ ಆರ್ಥಿಕತೆಗೆ ಶಕ್ತಿ ತುಂಬಿದ ಮನಮೋಹನ್ ಸಿಂಗ್

## ಹರಪನಹಳ್ಳಿ: ಶ್ರದ್ಧಾಂಜಲಿ ಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಎಂ.ವಿ ಅಂಜಿನಪ್ಪ



ಹರಪನಹಳ್ಳಿ, ಡಿ. 27 - ದೇಶದ ಆರ್ಥಿಕತೆಗೆ ಶಕ್ತಿ ತುಂಬಿ, ಹಲವು ಮಹತ್ತರ ಸಾಧನೆಗೆ ಮುನ್ನುಡಿ ಬರೆದು, ಆರ್‌ಬಿಐ ಗೌರ್ನರ್ ಆಗಿ, ಆರ್ಥಿಕ ಮಂತ್ರಿಯಾಗಿ, ಭಾರತದ ಪ್ರಧಾನಿಯಾಗಿಯೂ ದೇಶ ಸೇವೆಗೈದ ಮಹಾನ್ ಚೇತನ ಮನಮೋಹನ್ ಸಿಂಗ್ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ ಅಂಜಿನಪ್ಪ ಹೇಳಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಅವರು ಮಾತನಾಡಿದರು.

ಸಾಧಾರಣ ಹಿನ್ನೆಲೆಯಿಂದ ಬಂದಂತಹ ಮನ ಮೋಹನ್ ಸಿಂಗ್ ಅವರು ದೇಶದ ಆರ್ಥಿಕತೆಯ ಮೇಲೆ 'ದೊಡ್ಡ ಛಾಪು' ಮೂಡಿಸಿದ್ದಾರೆ. ಅತ್ಯಂತ ಗೌರವಾನ್ವಿತ ವ್ಯಕ್ತಿಯಾಗಿರುವ ಸಿಂಗ್, ಸರಳ, ಸಜ್ಜನ ಮತ್ತು ಪ್ರಾಮಾಣಿಕ ರಾಜಕಾರಣಿಯಾಗಿ ಬೆಳೆದಿದ್ದರು ಎಂದರು.

ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಟಿ.ವೆಂಕಟೇಶ್ ಮಾತನಾಡಿ, ದೇಶ ಕಂಡ ಪ್ರಾಮಾಣಿಕ ಪ್ರಧಾನ ಮಂತ್ರಿಗಳಲ್ಲಿ ಮನಮೋಹನ್ ಸಿಂಗ್ ಅವರು ಸಹ ಒಬ್ಬರು. ಅರ್ಥಶಾಸ್ತ್ರದಲ್ಲಿ ಅಪಾರ ವಿದ್ವತ್ತನ್ನು ಹೊಂದಿದ್ದ ಅವರು, ಭಾರತವನ್ನು ಬಲಾಢ್ಯ ಆರ್ಥಿಕತೆಯಾಗಿ ಬೆಳೆಸಲು ಬುನಾದಿ ಹಾಕಿದರು. ದೇಶದ ಆರ್ಥಿಕ ವ್ಯವಸ್ಥೆಗೆ ಜೀವ ಚೈತನ್ಯ ತುಂಬಿ, ಅದನ್ನು ಪುನರುತ್ಥಾನಗೊಳಿಸಿದ ಹಿರಿಮೆ ಅವರದಾಗಿತ್ತು. ಅವರ ನಿಧನದಿಂದ ದೇಶವು ಮೇಧಾವಿಯೊಬ್ಬರನ್ನು ಕಳೆದುಕೊಂಡಿದೆ ಎಂದರು

ಪುರಸಭಾ ಸದಸ್ಯ ಡಿ.ಅಬ್ದುಲ್ ರೆಹಮಾನ್ ಸಾಬ್ ಮಾತನಾಡಿ, ದೇಶವನ್ನು ಆರ್ಥಿಕ ಮುಗ್ಗಟ್ಟಿನಿಂದ ಪಾರು ಮಾಡಿದ ಶ್ರೇಯಸ್ಸು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಇವರಿಗೆ ಸಲ್ಲುತ್ತದೆ. ಪಿ.ವಿ. ನರಸಿಂಹರಾಯರ ಆಡಳಿತದಲ್ಲಿ ಐದು ವರ್ಷ ಆರ್ಥಿಕ ಮಂತ್ರಿಯಾಗಿ ಕೆಲಸ ಮಾಡಿದ್ದರು. ಆ ಕಾಲದಲ್ಲಿ ಸುಧಾರೀಕರಣ, ಖಾಸಗೀಕರಣ ಮಾಡುವ ಮೂಲಕ ದೇಶದ ಆರ್ಥಿಕತೆಗೆ ದೊಡ್ಡ ಶಕ್ತಿ ತಂದು ಕೊಟ್ಟರು. ಇದರಿಂದ ಆರ್ಥಿಕ ಮುಗ್ಗಟ್ಟಿನಿಂದ ದೇಶ ಮುಕ್ತವಾಯಿತು ಎಂಬುದನ್ನು ನಾವು ಸ್ಮರಿಸಬೇಕಾಗುತ್ತದೆ ಎಂದರು.

ಇವೇಳೆ ಪುರಸಭೆ ಸದಸ್ಯರಾದ ಪೈಲ್ವಾನ್ ಗಣೇಶ, ಲಾಟಿ ದಾದಪೀರ್, ಗೊಂಗಡಿ ನಾಗರಾಜ, ಮುಖಂಡರಾದ ದಂಡಿನ ಹರೀಶ, ಟಿ.ಹೆಚ್.ಎಂ. ಮಂಜುನಾಥ, ಎಂ.ವಿ.ಕೃಷ್ಣಕಾಂತ, ಎಲ್. ಎಂ.ನಾಯ್ಕ, ಸಲಿಂ ಅಹಮದ್, ಗುಡಿ ನಾಗರಾಜ, ಪೈಲ್ವಾನ್ ಬಸಪ್ಪ ಸೇರಿದಂತೆ ಇತರರು ಇದ್ದರು.

# ವಕೀಲರ ಕಲ್ಯಾಣ ನಿಧಿಗೆ ದೇಣಿಗೆ



ದಾವಣಗೆರೆ, ಡಿ. 26 - ನಗರದ ವಕೀಲರ ಕಲ್ಯಾಣ / ಮರಣೋತ್ತರ ನಿಧಿ ಟ್ರಸ್ಟ್‌ಗೆ ವಕೀಲ ವಾಗೀಶ್ ಕಟಗಿಹಳ್ಳಿಮಠ ಅವರು 1,11,111/- ರೂ.ಗಳನ್ನು ವಕೀಲರ ಸಂಘದಲ್ಲಿ ನಡೆದ ವಕೀಲರ ದಿನಾಚರಣೆಯ ಸಂದರ್ಭದಲ್ಲಿ ದೇಣಿಗೆ ನೀಡಿದ್ದಾರೆ.

# ನಿತೀಶ್ ಕುಮಾರ್, ನವೀನ್ ಪಟ್ನಾಯಕ್‌ಗೆ ಭಾರತರತ್ನ ನೀಡಲು ಕೇಂದ್ರ ಸಚಿವ ಒತ್ತಾಯ

ನವದೆಹಲಿ, ಡಿ. 25- ದೇಶದ ಅತ್ಯುನ್ನತ ನಾಗರಿಕ ಗೌರವವಾದ ಭಾರತರತ್ನವನ್ನು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಹಾಗೂ ಮಾಜಿ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರಿಗೆ ನೀಡಬೇಕು ಎಂದು ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಹೇಳಿದ್ದಾರೆ. ಬಿಹಾರದಲ್ಲಿ ನಿತೀಶ್ ಕುಮಾರ್ ಅವರ ಜೆಡಿಯು ಹಾಗೂ ಬಿಜೆಪಿ ಮೈತ್ರಿ ಸರ್ಕಾರ ಅಧಿಕಾರದಲ್ಲಿದೆ. ಕೇಂದ್ರ ಸರ್ಕಾರಕ್ಕೂ ಜೆಡಿಯು ಬೆಂಬಲ ಮಹತ್ವದ್ದಾಗಿದೆ. ನವೀನ್ ಪಾಟ್ನಾಯಕ್ ಅವರು ಒಡಿಶಾದ ಮಾಜಿ ಮುಖ್ಯಮಂತ್ರಿಯಾಗಿದ್ದಾರೆ.

ಇತ್ತೀಚೆಗಷ್ಟೇ ನಡೆದ ಒಡಿಶಾ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸುವ ಮೂಲಕ ನವೀನ್ ಪಾಟ್ನಾಯಕ್ ಸರ್ಕಾರವನ್ನು ಉರುಳಿಸಿತ್ತು.

# ನಗರದಲ್ಲಿ ಇಂದು ರಾಷ್ಟ್ರೀಯ ಗ್ರಾಹಕರ ದಿನ

ದಾವಣಗೆರೆ : ನಗರದ ಆರ್.ಎಲ್. ಕಾನೂನು ಕಾಲೇಜಿನಲ್ಲಿ ಶನಿವಾರ ಬೆಳಿಗ್ಗೆ 10 ಗಂಟೆಗೆ ರಾಷ್ಟ್ರೀಯ ಗ್ರಾಹಕರ ದಿನ 2024-25ರ ಅಂಗವಾಗಿ ಕಾಲೇಜಿನ ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ತುಮಕೂರು ಜಿಲ್ಲೆಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಜಿ.ಟಿ. ವಿಜಯಲಕ್ಷ್ಮಿ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ದಾವಣಗೆರೆ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣಕುಮಾರ್ ಆಗಮಿಸಲಿದ್ದಾರೆ. ಅಧ್ಯಕ್ಷತೆಯನ್ನು ಆರ್.ಎಲ್. ಕಾನೂನು ಕಾಲೇಜಿನ ಪ್ರಾಚಾರ್ಯ ಡಾ.ಜಿ.ಎಸ್. ಯತೀಶ್ ವಹಿಸಲಿದ್ದಾರೆ. ಕಾರ್ಯಕ್ರಮ ಸಂಯೋಜಕರಾಗಿ ಆರ್.ಎಲ್. ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಟಿ. ವಿದ್ಯಾಧರ ವೇದವರ್ಮ, ಡಾ.ಟಿ.ಸಿ. ಪಂಕಜಾ ಕಾರ್ಯ ನಿರ್ವಹಿಸಲಿದ್ದಾರೆ.

# ಗಡಿಭಾಗದ ಶಾಲೆಗಳಿಗೆ ಇಲ್ಲ ಮೂಲ ಸೌಕರ್ಯ : ಪಿ. ಕೃಷ್ಣೇಗೌಡರು



ದಾವಣಗೆರೆ, ಡಿ. 27 - ಮಂಡ್ಯದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಒಂದು ಪಕ್ಷದ ಕಾರ್ಯಕ್ರಮವಾಗಿ ಆಯೋಜನೆಗೊಂಡಿ ರುವುದು ಖಂಡನೀಯ ಎಂದು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದ ರಾಜ್ಯಾಧ್ಯಕ್ಷ ಪಿ. ಕೃಷ್ಣೇಗೌಡರು ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದ ವತಿಯಿಂದ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.


ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಮ್ಮೇಳನಗಳು ನಡೆದಿವೆ. ಸಮ್ಮೇಳನದಲ್ಲಿ ರಾಜ್ಯ ಸರ್ಕಾರಕ್ಕೆ ವರದಿಗಳನ್ನು ಸಲ್ಲಿಸುತ್ತಾ ಬಂದಿದ್ದು, ಗಡಿ ಕನ್ನಡ ಶಾಲೆಗಳ ವಿಚಾರ, ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಮುಂತಾದ ಸಮಸ್ಯೆಗಳ ಬಗ್ಗೆ ಕ್ರಮಕ್ಕೆ ಮುಂದಾಗುವುದಾಗಿ ಘೋಷಿಸಿ ಹಿಂಪಡೆದಿರುವುದನ್ನು ಖಂಡಿಸಿದರು.

ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿಯನ್ನು ಜಾರಿಗೆ ತರುವಂತೆ ಸಮ್ಮೇಳನದಲ್ಲಿ ನಿರ್ಣಯ ಕೈಗೊಂಡು ಸರ್ಕಾರಕ್ಕೆ ಒತ್ತಾಯಿಸುವಂತೆ ಸಮ್ಮೇಳನದ ಸರ್ವಾಧ್ಯಕ್ಷರಲ್ಲಿ ಮನವಿ ಮಾಡಿದರು.

ಇತ್ತೀಚಿನ ಸಮ್ಮೇಳನಗಳು ನಾಡು-ನುಡಿ, ನೆಲ-ಜಲ, ಕನ್ನಡ ಗಡಿ ಭಾಗದ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಲ್ಲಿ ಸರ್ಕಾರ ವಿಫಲವಾಗಿದೆ. ಸಮ್ಮೇಳನ ಒಂದು ಪಕ್ಷಕ್ಕೆ ಸೀಮಿತವಾಗದಂತೆ ನೋಡಿಕೊಳ್ಳಬೇಕು ಎಂದು ಆಗ್ರಹಿಸಿದರು.

ಕರವೇ ಸ್ವಾಭಿಮಾನಿ ಬಣದ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಎರಬಾಳು ಕವಿತಾ, ಉತ್ತರ ಕರ್ನಾಟಕದ ಅಧ್ಯಕ್ಷ ಲಕ್ಷ್ಮಣ ಕಂಬಾಗಿ, ಬೆಳಗಾವಿ ವಿಭಾಗೀಯ ಅಧ್ಯಕ್ಷ ರಾಜ್ ಶಿರಹಟ್ಟಿ, ಕವಡೆ ಚಲನಚಿತ್ರ ನಾಯಕ ನಟ ರಘು, ನಾಯಕ ನಟಿ ಪ್ರೇರಣಾ ಸೇರಿದಂತೆ ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳ ಜಿಲ್ಲಾಧ್ಯಕ್ಷರು, ತಾಲ್ಲೂಕು ಅಧ್ಯಕ್ಷರು, ಮಹಿಳೆಯರು ಭಾಗವಹಿಸಿದ್ದರು.

# ಸಿಂಗ್ ಕೊಡುಗೆ ಅಪಾರ : ದೇವೇಗೌಡ



ಬೆಂಗಳೂರು, ಡಿ. 27- ದೇಶ ಆರ್ಥಿಕವಾಗಿ ಭೀಕರ ಪರಿಸ್ಥಿತಿಯಲ್ಲಿದ್ದಾಗ ಹಣಕಾಸು ಸಚಿವರಾಗಿದ್ದ ಡಾ. ಮನಮೋಹನ್ ಸಿಂಗ್ ಸಮರ್ಥ ಕಾರ್ಯ ನಿರ್ವಹಿಸಿ, ಅರ್ಥ ವ್ಯವಸ್ಥೆಯನ್ನು ಸರಿದಾರಿಗೆ ತಂದರು ಎಂದು ಮಾಜಿ ಪ್ರಧಾನಿ ಹೆಚ್. ಡಿ.ದೇವೇಗೌಡ ಗುಣಗಾನ ಮಾಡಿದ್ದಾರೆ.

ಜೆಡಿಎಸ್ ರಾಜ್ಯ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಡಾ.ಮನಮೋಹನ್ ಸಿಂಗ್ ಶ್ರದ್ಧಾಂಜಲಿ ಸಮರ್ಪಣೆ ಸಭೆಯಲ್ಲಿ ಮಾತನಾಡಿದ ಅವರು, ಇದು ಅತ್ಯಂತ ದುಃಖದ ದಿನ, ಅವರ ನಿಧನ ನನಗೆ ಬಹಳ ನೋವುಂಟು ಮಾಡಿದೆ, ನಾನು ಅವರನ್ನು ನೋಡಿದ್ದು 1991ರಲ್ಲಿ, ಲೋಕಸಭೆಯಲ್ಲಿ, ನಾನು ಕೂಡ ಮೊದಲ ಬಾರಿಗೆ ಲೋಕಸಭೆಗೆ ಹೋಗಿದ್ದೆ, ಪಿ.ವಿ. ನರಸಿಂಹ ರಾವ್ ಸರ್ಕಾರದಲ್ಲಿ ಆರ್ಥಿಕ ಸಚಿವರಾಗಿದ್ದರು, ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಸರಿಪಡಿಸಲು ಅನೇಕ ಪ್ರಯತ್ನಗಳನ್ನು ಮಾಡಿದರು ಎಂದರು.

ಆರ್ಥಿಕವಾಗಿ ದೇಶದ ಸ್ಥಿತಿ ಬಹಳ ಹದಗೆಟ್ಟಿತ್ತು, ಅದಕ್ಕೂ ಹಿಂದೆ ದೇಶದ 130 ಟನ್ ಚಿನ್ನ ಒತ್ತೆ ಇಡಲಾಗಿತ್ತು, ಅಂತಹ ಭೀಕರ ಆರ್ಥಿಕ ಪರಿಸ್ಥಿತಿಯ ಸನ್ನಿವೇಶದಲ್ಲಿ ಡಾ.ಮನಮೋಹನ್ ಸಿಂಗ್ ಆರ್ಥಿಕ ಸಚಿವರಾಗಿ ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದರು ಎಂದು ನೆನಪು ಮಾಡಿಕೊಂಡರು.

ಮನಮೋಹನ್ ಸಿಂಗ್ ಅವರನ್ನು ನಾನು ಬಹಳ ಟೀಕೆ ಮಾಡಿದ್ದೆ, ಅವರ ನೀತಿಗಳನ್ನು ಪ್ರಶ್ನೆ ಮಾಡಿದ್ದೆ, ಖಾಸಗೀಕರಣ, ವಿದೇಶದಿಂದ ಹಣ ಬರಲು ನಮ್ಮ ದೇಶದ ಆರ್ಥಿಕ ನೀತಿಗಳನ್ನು ಮಾರ್ಪಾಡು ಮಾಡಿ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತಂದರು, ಇದು ಬಹಳ ದೊಡ್ಡ ಬೆಳವಣಿಗೆ ಎಂದು ಬಣ್ಣಿಸಿದರು.

ಮನಮೋಹನ್ ಸಿಂಗ್ ಸರಳ, ಸಜ್ಜನ, ಪ್ರಾಮಾಣಿಕ ವ್ಯಕ್ತಿ ಆಗಿದ್ದರು, ನಾವು ಪಕ್ಷ ರಾಜಕಾರಣ ಹೊರತುಪಡಿಸಿ ಅವರನ್ನು ನೆನೆಯುತ್ತಿದ್ದೇವೆ, ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ನಮ್ಮ ಪಕ್ಷದ ಪರವಾಗಿ, ವೈಯಕ್ತಿಕವಾಗಿ ಮನಮೋಹನ್ ಸಿಂಗ್ ಅವರಿಗೆ ಅಂತಿಮ ಗೌರವ ಸಲ್ಲಿಸಿದ್ದಾರೆ ಎಂದರು.

ನರಸಿಂಹರಾವ್ ಸರ್ಕಾರದಲ್ಲಿ ದೇಶದ ಗೌರವ ಉಳಿಸಲು ಆರ್ಥಿಕ ತಜ್ಞರಾಗಿ ಮನಮೋಹನ್ ಸಿಂಗ್ ಸಲ್ಲಿಸಿದ ಸೇವೆ, ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ದೇಶವನ್ನು ಪಾರು ಮಾಡಿತು, ದೇಶಕ್ಕೆ ಸುದೀರ್ಘ ಕಾಲ ಸೇವೆ ಸಲ್ಲಿಸಿದ್ದಾರೆ. ಡಾ.ಸಿಂಗ್ ಜಾರಿಗೆ ತಂದ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ನೀತಿಗಳ ಮೂಲಕ ದೇಶಕ್ಕೆ ವಿದೇಶಿ ನೇರ ಬಂಡವಾಳ ದೊಡ್ಡ ಪ್ರಮಾಣದಲ್ಲಿ ಹರಿದು ಬಂದಿತು, ಹಣಕಾಸು ಸಚಿವರಾಗುವುದಕ್ಕೂ ಮೊದಲು ಜಾಗತಿಕ ಮಟ್ಟದಲ್ಲಿ ಕೆಲಸ ಮಾಡಿದ್ದರು, ಅವರ ದೊಡ್ಡ ಅನುಭವ ಆರ್ಥಿಕ ವಿಚಾರದಲ್ಲಿ ತುಂಬಾ ಬುದ್ಧಿವಂತರನ್ನಾಗಿಸಿತ್ತು.

ಹಿರಿಯ ಮುತ್ಸದ್ದಿ ರಾಜಕಾರಣಿ 92 ವಯಸ್ಸಿನಲ್ಲಿ ಅಗಲಿದ್ದಾರೆ, ಅವರ ನಿಧನದ ಹಿನ್ನೆಲೆಯಲ್ಲಿ ದೇಶಾದ್ಯಂತ ಯಾವುದೇ ಸರ್ಕಾರಿ ಕಾರ್ಯಕ್ರಮ ಮಾಡಬಾರದು, ಶೋಕಾಚರಣೆ ಇದೆ, ರಾಷ್ಟ್ರ ಧ್ವಜವನ್ನು ಅರ್ಧಕ್ಕೆ ಇಳಿಸಿ ಗೌರವ ಕೊಡಬೇಕು.

ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ, ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ದೇವರು ನೀಡಲಿ ಎಂದು ಮಾಜಿ ಪ್ರಧಾನಿ ದೇವೇಗೌಡ ಗದ್ಗದಿತರಾದರು.

ಸಂಸತ್ ಅಧಿವೇಶನ ಮುಗಿದ ನಂತರ ತಮ್ಮ ಲೋಕಸಭೆ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಬೆಂಗಳೂರಿಗೆ ಆಗಮಿಸಿದ್ದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಅಗಲಿದ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರಿಗೆ ಅಂತಿಮ ನಮನ ಸಲ್ಲಿಸಲು ಶುಕ್ರವಾರ ಬೆಳಗ್ಗೆಯೇ ನವದೆಹಲಿಗೆ ವಾಪಾಸ್ಸಾದರು.

ವಿಮಾನ ನಿಲ್ದಾಣದಿಂದ ನೇರವಾಗಿ ಡಾ.ಮನಮೋಹನ್ ಸಿಂಗ್ ನಿವಾಸಕ್ಕೆ ತೆರಳಿದ ಅವರು, ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿ, ಅವರ ಕುಟುಂಬ ಸದಸ್ಯರಿಗೆ ಸಂತಾಪ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಾ. ಮನಮೋಹನ್ ಸಿಂಗ್ ದುರಿತ ಕಾಲದಲ್ಲಿ ದೇಶ ಮುನ್ನಡೆಸಿದ ಮೇಧಾವಿ, ದೂರದೃಷ್ಟಿ, ಸಂಯಮ ಮತ್ತು ಆರ್ಥಿಕ ಮೇದಸ್ಸಿನಿಂದ ರಾಷ್ಟ್ರವನ್ನು ಸಶಕ್ತವಾಗಿ ಮಾಡಿದರು, ಅಲ್ಲದೆ, ಆರ್ಥಿಕ ಸುಧಾರಣೆಗಳ ಮೂಲಕ ಭಾರತಕ್ಕೆ ಜಾಗತಿಕ ಮನ್ನಣೆ ತಂದುಕೊಟ್ಟ ಅವರ ಕೊಡುಗೆಗಳು ಚಿರಸ್ಮರಣೀಯ ಎಂದರು.

ದೇಶದ ಅಭಿವೃದ್ಧಿಗೆ ಮಹಾನ್ ಕೊಡುಗೆ ನೀಡಿದ್ದಾರೆ, ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ದೇಶವನ್ನು ಅಪಾಯದಿಂದ ಪಾರು ಮಾಡಿ, ಆರ್ಥಿಕ ಸಚಿವರಾಗಿ, ಪ್ರಧಾನಿಯಾಗಿ, ಹಣಕಾಸು ತಜ್ಞರಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ ಎಂದರು.

# ನಗರದಲ್ಲಿ ಇಂದು ಕಬಡ್ಡಿ ತಂಡದ ಆಯ್ಕೆ ಪ್ರಕ್ರಿಯೆ

ಕರ್ನಾಟಕ ರಾಜ್ಯ ಅಮೆಚೂರು ಕಬ್ಬಡಿ ಸಂಸ್ಥೆ ವತಿಯಿಂದ ಬರುವ ಜನವರಿ 6ರಿಂದ ಮೂರು ದಿನ ದೊಡ್ಡಬಳ್ಳಾಪುರದಲ್ಲಿ ನಡೆಯುವ ಕರ್ನಾಟಕ ರಾಜ್ಯ ಪುರುಷರ ಕಬಡ್ಡಿ ಚಾಂಪಿಯನ್‌ಶಿಪ್ ಪಂದ್ಯಾಟಕ್ಕೆ ದಾವಣಗೆರೆ ಜಿಲ್ಲಾ ಕಬಡ್ಡಿ ತಂಡದ ಆಯ್ಕೆ ಪ್ರಕ್ರಿಯೆಯು ಇಂದು ಸಂಜೆ 3.30ಕ್ಕೆ ನಗರದ ಸ್ಟೇಡಿಯಂನ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ 6363118501, 9972049306.

# ಮನಸ್ಸನ್ನು ಸುಸಂಸ್ಕೃತಗೊಳಿಸುವುದೇ ಶಿಕ್ಷಣದ ಉದ್ದೇಶ

## ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಮಲ್ಲಿಕಾರ್ಜುನ ಆರ್. ಹಲಸಂಗಿ



ದಾವಣಗೆರೆ, ಡಿ. 27 - ಮಾನವನ ಮನಸ್ಸನ್ನು ಸುಸಂಸ್ಕೃತಗೊಳಿಸುವುದೇ ಶಿಕ್ಷಣದ ಉದ್ದೇಶವಾಗಿದೆ ಎಂದು ಪ್ರೊ. ಮಲ್ಲಿಕಾರ್ಜುನ ಆರ್. ಹಲಸಂಗಿ ತಿಳಿಸಿದರು.

ನಗರದ ಕಲಾ ಮತ್ತು ವಾಣಿಜ್ಯ ಕಾಲೇಜಿನ ಈಚೆಗೆ ಆಯೋಜಿಸಿದ್ದ 2024-25ನೇ ಸಾಲಿನ ಸಾಂಸ್ಕೃತಿಕ ವೇದಿಕೆ, ಯುವ ರೆಡ್‌ಕ್ರಾಸ್ ಘಟಕ, ಎನ್‌ಸಿಸಿ, ಕ್ರೀಡಾ ವಿಭಾಗ ಉದ್ಯೋಗ ಭರವಸೆ ಕೋಶ, ವಿದ್ಯಾರ್ಥಿ ಸಂಘದ ಉದ್ಘಾಟನೆ ಹಾಗೂ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ 'ಪರಿಚಯ' ಉದ್ಘಾಟಿಸಿ ಮಾತನಾಡಿದರು.

ಮೌಲ್ಯಾಧಾರಿತ ಶಿಕ್ಷಣ ಪಡೆಯುವುದರಿಂದ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಬಹುದು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಭಾವನಾತ್ಮಕ, ವೈಚಾರಿಕ ಮತ್ತು ವಿಶ್ಲೇಷಣಾತ್ಮಕ ಶಕ್ತಿಗಳನ್ನು ಬಳಸಿಕೊಂಡರೆ ತಮ್ಮ ಭವಿಷ್ಯವನ್ನು ತಾವೇ ಕಟ್ಟಿಕೊಳ್ಳಬಹುದು ಎಂದು ಹೇಳಿದರು.


ಪ್ರತಿಯೊಬ್ಬ ವಿದ್ಯಾರ್ಥಿಯು ವೈಚಾರಿಕ ಚಿಂತನೆ ಬೆಳೆಸಿಕೊಳ್ಳಬೇಕು ಮತ್ತು ಜವಾಬ್ದಾರಿಯುತ ಜೀವನ ಸಾಗಿಸುವಂತವರು ಆಗಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾಲೇಜಿನ ಪ್ರಾಚಾರ್ಯ ಡಾ.ಜಿ.ಬಿ ಬೋರಯ್ಯ ಮಾತನಾಡಿ, ವಿದ್ಯಾರ್ಥಿಗಳು ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ತಮ್ಮನ್ನು ತೊಡಗಿಸಿಕೊಳ್ಳಬೇಕು, ಆಗ ಯಶಸ್ಸು ಸಿಗಲಿದೆ ಎಂದು ಹೇಳಿದರು.

ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಬೊಮ್ಮಣ್ಣ ಮಾತನಾಡಿ, ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದುಕೊಂಡು ಸಮಾಜಕ್ಕೆ ಮಾದರಿಯಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅನಿತಾ ಕುಮಾರಿ, ರಶ್ಮಿ, ಡಾ.ಹೆಚ್.ಆರ್ ತಿಪ್ಪೇಸ್ವಾಮಿ, ರಮೇಶ ಪೂಜಾರ್, ಆನಂದ್, ಡಾ. ಚಮನ್‌ಸಾಬ್, ಪರಶುರಾಮ, ಕರಿಬಸಪ್ಪ, ಕವಿತಾ ಪಾಟೀಲ್, ಸಲ್ಮಾಂ, ಸೌಮ್ಯ ಆಚಾರ್, ಮೌಸಿನಾ ಕೌಸರ್, ಬೀಬಿ ಅಮಿನಾ, ರೇಖಾ, ಸ್ವಪ್ನ, ಗಾಯತ್ರಿ, ರೇಖಾ ಇತರರು ಇದ್ದರು.

# ನಗರ - ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ



ದಾವಣಗೆರೆ ತಾಲ್ಲೂಕಿನ ವಿವಿಧ ವಿದ್ಯುತ್ ಮಾರ್ಗಗಳಲ್ಲಿ ತುರ್ತು ಕಾಮಗಾರಿ ಕೈಗೊಳ್ಳುವುದರಿಂದ ಇಂದು ಬೆಳಗ್ಗೆ 10ರಿಂದ ಸಂಜೆ 5ರ ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಮಾಮಾಸ್ ಜಾಯಿಂಟ್ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಶಾಮನೂರು ರಸ್ತೆ, ಎಸ್.ಎಸ್. ಲೇಔಟ್, ಎ ಬ್ಲಾಕ್, ಕುವೆಂಪು ನಗರ, ಬಾಟ್ಲಿ ಬಿಲ್ಡಿಂಗ್ ಸುತ್ತಮುತ್ತ, ಸಿದ್ದವೀರಪ್ಪ ಬಡಾವಣೆ, 1ನೇ ಅಡ್ಡ ರಸ್ತೆ ಯಿಂದ 7ನೇ ಅಡ್ಡ ರಸ್ತೆಯವರೆಗೆ, ಗ್ಲಾಸ್ ಹೌಸ್, ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಹಿಂಭಾಗದ ಪ್ರದೇಶ, ಬಿ.ಐ.ಇ.ಟಿ. ಕಾಲೇಜು ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಬಿನ್ನಿ ಕಂಪನಿ ರಸ್ತೆ, ಎಂ.ಜಿ ರಸ್ತೆ, ಎನ್.ಆರ್ ರಸ್ತೆ, ಮಹಾವೀರ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ಮಂಡಕ್ಕಿ ಭಟ್ಟಿ, 1ರಿಂದ 10ನೇ ಕ್ರಾಸ್, ಇಂದಿರಾ ನಗರ, ಸಿದ್ದರಾಮೇಶ್ವರ ಬಡಾವಣೆ, ಕಾರ್ಲ್‌ಮಾರ್ಕ್ಸ್ ನಗರ, ಕೋಳಿ ಚನ್ನಪ್ಪ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಹೆಚ್.ಕೆ.ಆರ್. ವೃತ್ತ, ಕೆಇಬಿ ಕಾಲೋನಿ, ನಿಟುವಳ್ಳಿ ಹಾಗೂ ನಿಟುವಳ್ಳಿ ಹೊಸ ಬಡಾವಣೆ, ಮೌನೇಶ್ವರ ಬಡಾವಣೆ, ಸೈಯದ್‌ಪೀರ್ ಬಡಾವಣೆ, ಐಟಿಐ ರಿಂಗ್ ರಸ್ತೆ, ಜಯನಗರ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಭಗೀರಥ ಸರ್ಕಲ್, ಕಾಳಿಕಾಂಬ ದೇವಸ್ಥಾನ, ಶಕ್ತಿನಗರ ಹಾಗೂ ಇ. ಎಸ್.ಐ ಆಸ್ಪತ್ರೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಪಿ.ಬಿ. ರಸ್ತೆ, ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಮುರಘ ರಾಜೇಂದ್ರ ಸ್ವಾಮಿಗಳ ಮಠ, ಜಾಧವ್ ಕ್ಲಿನಿಕ್ ಸುತ್ತಮುತ್ತ, ಶಿವಪ್ಪಯ್ಯ ವೃತ್ತದಿಂದ ಜಯದೇವ ವೃತ್ತದವರೆಗಿನ ಸುತ್ತಮುತ್ತಲಿನ ಪ್ರದೇಶಗಳು.

ಪೊಲೀಸ್ ಕಾಲೋನಿ, ತುಂಗ, ಭದ್ರಾ, ಸರಸ್ವತಿ, ಕೃಷ್ಣ ಬ್ಲಾಕ್, ಅರುಣಾ ವೃತ್ತ ಮತ್ತು ಸುತ್ತಲಿನ ಪ್ರದೇಶಗಳು. ಎಂ.ಸಿ.ಸಿ. 'ಎ ಬ್ಲಾಕ್, ನ್ಯಾಯಾಧೀಶರ ವಸತಿ ಗೃಹಗಳು, ತೊಗಟವೀರ ಕಲ್ಯಾಣ ಮಂಟಪ, ವಿನೋಬ ನಗರ 1ನೇ ಮುಖ್ಯ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

ಎಸ್.ಎಸ್. ಬಡಾವಣೆ 'ಎ ಬ್ಲಾಕ್, ಕೊಗ್ಗನೂರು, ಹನುಮನಹಳ್ಳಿ, ಆನಗೋಡು, ಹೆಬ್ಬಾಳು, ನೀರ್ಥಡಿ, ಶಿವಪುರ, ಹಾಲುವರ್ತಿ, ಗಂಗನಕಟ್ಟೆ, ನೇರ್ಲಿಗಿ, ಚಿನ್ನಸಮುದ್ರ ಸೇರಿದಂತೆ ಸುತ್ತಲಿನ ಗ್ರಾಮಗಳು ಮತ್ತು ಆರಾಧ್ಯ ಕೈಗಾರಿಕೆ,

ಶಾಂತಿನಗರ, ಕುಂದುವಾಡ ರಸ್ತೆ, ಮಹಾನಗರ ಪಾಲಿಕೆ ಕುಡಿಯುವ ನೀರಿನ ಸ್ಥಾವರ, ಬಸವೇಶ್ವರ ಬಡಾವಣೆ, ಮಹಾಲಕ್ಷ್ಮೀ ಬಡಾವಣೆ, ಬಾಲಾಜಿ ನಗರ, ಕುಂದುವಾಡ ಕೆರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.ರಿಲಾಯನ್ಸ್ ಮಾರ್ಕೆಟ್, ಸುಲ್ತಾನ್ ಡೈಮೈಂಡ್ಸ್, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. 60 ಅಡಿ ರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಡೆಂಟಲ್ ಕಾಲೇಜ್ ರಸ್ತೆ, ಮ್ಯಾಕ್ಸ್, ಕೆಎಸ್‌ಪಿ, ಕಡ್ಲಿ ಆಸ್ಪತ್ರೆ ಬಿಲ್ಡಿಂಗ್, ಬಿಎಸ್‌ಸಿ, ಎಆರ್‌ಜಿ ಕಾಲೇಜ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ನಿಜಲಿಂಗಪ್ಪ ಬಡಾವಣೆ, ರಿಂಗ್‌ರೋಡ್, ಕುಂದವಾಡ ರಸ್ತೆ, ಯಲ್ಲಮ್ಮನಗರ, ವಿನೋಬನಗರ 4 ಮತ್ತು 3ನೇ ಮೇನ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಎ.ವಿ.ಕೆ ಕಾಲೇಜ್ ರಸ್ತೆ, ರತ್ನಮ್ಮ ಮಹಿಳಾ ಹಾಸ್ಟೆಲ್, ಸೀತಮ್ಮ ಕಾಲೇಜ್ ಮತ್ತು ಬಡಾವಣೆ ಪೊಲೀಸ್ ಠಾಣೆ, ಹದಡಿ ರೋಡ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಎಂ.ಬಿ. ಕೇರಿ, ಹೊಂಡದ ವೃತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ವೃತ್ತ, ಚಲವಾದಿ ಕೇರಿ, ಇ.ಡಬ್ಲ್ಯೂ.ಎಸ್ ಕಾಲೋನಿ, ಹಳೇ ಪೇಟೆ, ಬಾರ್‌ಲೈನ್ ರಸ್ತೆ, ಇ. ಎಸ್.ಐ ಆಸ್ಪತ್ರೆ ಶಕ್ತಿನಗರ, ಬನಶಂಕರಿ ದೇವಸ್ಥಾನ ರಾಜೇಂದ್ರ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಮೀನು ಮಾರುಕಟ್ಟೆ, ಜೋಗಲ್ ಬಾಬಾ ಲೇ ಔಟ್, ಮುಸ್ತಾಫಾ ನಗರ, ದಿಂಡದಹಳ್ಳಿ, ನರಗನಹಳ್ಳಿ, ಮಾಯಕೊಂಡ, ಬೊಮ್ಮೆನಹಳ್ಳಿ, ಬಾವಿಹಾಳು, ಬುಳ್ಳಾಪುರ, ಕೊಡಗನೂರು, ನಲ್ಕುಂದ, ಬಸಾಪುರ, ಅಣಬೇರು ಗ್ರಾಮ ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಆಲೂರು, ಬಿ.ಜಿ.ಹಳ್ಳಿ, ಸಿದ್ದನೂರು, ಮಲ್ಲಾಪುರ, ಗುಡಾಳು, ಅಣಜಿ, ಕಿತ್ತೂರು, ಕಂದನಕೋವಿ, ಮೆಳ್ಳೇಕಟ್ಟೆ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು, ರೆಡ್ಡಿ ಕ್ಯಾಂಪ್, ಪುಟಗಾನಾಳು, ಶ್ರೀರಾಮ ನಗರ, ಕಾಡಜ್ಜಿ, ಬಸವನಾಳು, ನಾಗರಕಟ್ಟೆ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

# ಕನ್ನಡ ಜೀವಂತಿಕೆಯ ಭಾಷೆ

**ಎ.ಆರ್.ಜಿ ಕಾಲೇಜಿನ ಕನ್ನಡ ಹಬ್ಬ ಕಾರ್ಯಕ್ರಮದಲ್ಲಿ ಪ್ರೊ. ಬಾತಿ ಬಸವರಾಜ**

ದಾವಣಗೆರೆ, ಡಿ. 27 - ಕನ್ನಡ ಭಾಷೆಯು ಮಾನವ ಈ ಭೂಮಿಯಲ್ಲಿ ಎಂದು ಜನಿಸಿದನೋ ಅಂದಿನಿಂದ ಈ ಭಾಷೆಗೆ ಇತಿಹಾಸವಿದೆ. ಭಾಷೆ ಬೆಳೆಯಬೇಕು. ಭಾಷೆ ಬೆಳೆದರೆ ಮಾನವ ಸಮುದಾಯ ಬೆಳೆಯಲು ಸಾಧ್ಯ. ಪ್ರತಿಯೊಬ್ಬರೂ ಸಹ ಇತರೆ ಭಾಷೆಗಳನ್ನು ಕಲಿತುಕೊಂಡರೆ ವ್ಯವಹಾರಿಕತೆಯನ್ನು ನಡೆಸಲು ಅನುಕೂಲವಾಗುತ್ತದೆ ಎಂದು ದವನ್ ಕಾಲೇಜಿನ ಶೈಕ್ಷಣಿಕ ನಿರ್ದೇಶಕ ಪ್ರೊ. ಬಾತಿ ಬಸವರಾಜ್ ಹೇಳಿದರು.

ನಗರದ ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಕಾಲೇಜಿನ ಕನ್ನಡ ವಿಭಾಗದ ಕನ್ನಡ ಸಾಹಿತ್ಯ ವೇದಿಕೆ, ಸಾಂಸ್ಕೃತಿಕ ವೇದಿಕೆ, ಐಕ್ಯೂಎಸಿ ಹಮ್ಮಿಕೊಂಡಿದ್ದ 'ಎಆರ್‌ಜಿ ಕನ್ನಡ ಹಬ್ಬ' ಉದ್ಘಾಟಿಸಿ ಮಾತನಾಡಿದರು.

ಕನ್ನಡ ಮತ್ತು ಸಂಸ್ಕೃತಿಯ ಭಾಗವಾಗಿರುವುದರಿಂದ ಕಾಲಕಾಲಕ್ಕೆ ತಕ್ಕಂತೆ ಭಾಷೆಯ ಬಳಕೆ ಮಾಡಿಕೊಂಡಾಗ ಮಾತ್ರ ಕನ್ನಡದ ಅಸ್ತಿತ್ವ ಉಳಿಯುತ್ತದೆ. ಕನ್ನಡ ನುಡಿಯ ಸೊಬಗು ಅತ್ಯಂತ ಶ್ರೀಮಂತವಾದುದ್ದು, ಇಲ್ಲಿನ ನೆಲ, ಜಲ, ಜನರ ಬದುಕು ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತ ಎಲ್ಲವನ್ನು ಒಳಗೊಂಡಿದೆ. ಕನ್ನಡ ಭಾಷೆ ಇಂದು ವಿಶ್ವಾತ್ಮಕವಾಗಿ ಬೆಳೆದಿದೆ ಎಂದರು.

ಕನ್ನಡಿಗರು ಜಗತ್ತಿನಾದ್ಯಂತ ಉನ್ನತ ಸ್ಥಾನವನ್ನು ಪಡೆದಿರುವುದು ಕನ್ನಡ ಭಾಷೆಯಿಂದ ಮಾತ್ರ. ಹಾಗಾಗಿ ಕನ್ನಡ ಜೀವಂತಿಕೆಯ ಭಾಷೆಯಾಗಿದೆ ಎಂದು ಹೇಳಿದರು.

ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ಹೆಚ್. ಮುರುಗೇಂದ್ರಪ್ಪ ಮಾತನಾಡಿ, ಕನ್ನಡ ನಾಡು, ನುಡಿಯನ್ನು ಪ್ರತಿಯೊಬ್ಬರೂ ಬೆಳೆಸುವುದು ಆದ್ಯ ಕರ್ತವ್ಯ. ಅತ್ಯಂತ ಸೊಬಗು ಶ್ರೀಮಂತಿಕೆಯ ನಾಡು ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ಜಿ.ಬಿ. ಬೋರಯ್ಯ ಅವರು, ಕನ್ನಡವನ್ನು ಹೆಚ್ಚು ಹೆಚ್ಚು ಮಾತನಾಡುವುದರಿಂದ ಕನ್ನಡ ಉಳಿಯುತ್ತದೆ ಎಂದು ಹೇಳಿದರು.

ಪ್ರಾಚಾರ್ಯ ಬೊಮ್ಮಣ್ಣ ಅವರು ಕನ್ನಡ ರಾಜ್ಯೋತ್ಸವಕ್ಕಿಂತ ಕರ್ನಾಟಕ ರಾಜ್ಯೋತ್ಸವ ಆಚರಿಸುವುದು ಮುಖ್ಯ ಎಂದರು.

ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ. ಅನಿತಾ ಕುಮಾರಿ, ಎಆರ್‌ಜಿ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಎಸ್.ಬಿ. ನಾಗರಾಜ್, ಐಕ್ಯೂಎಸಿ ಸಂಚಾಲಕಿ ಪ್ರೊ. ರಶ್ಮಿ, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ ಆನಂದ್, ಗ್ರಂಥಾಲಯ ವಿಭಾಗದ ಮುಖ್ಯಸ್ಥ ಡಾ. ಚಮನ್ ಸಾಬ್,ಅಧೀಕ್ಷಕ ಕರಿಬಸಪ್ಪ, ಉಪನ್ಯಾಸಕರಾದ ಕವಿತಾ ಪಾಟೀಲ್, ಸಲ್ಮಾ, ಸೌಮ್ಯ ಆಚಾರ್, ಮೌಸಿನಾ ಕೌಸರ್, ಬೇಬಿ ಅಮೀನಾ, ರೇಖಾ, ಕೆ.ಟಿ. ಸ್ವಪ್ನಾ, ಗಾಯತ್ರಿ, ರೇಖಾ ಉಪಸ್ಥಿತರಿದ್ದರು.

ಅಜೇಯ್ ಪಾಟೀಲ್ ಸ್ವಾಗತಿಸಿದರು. ಡಾ.ಹೆಚ್. ಆರ್. ತಿಪ್ಪೇಸ್ವಾಮಿ ವಂದಿಸಿ, ಆರ್.ಲಕ್ಷ್ಮೀ ಕಾರ್ಯಕ್ರಮ ನಿರೂಪಿಸಿದರು.

# ಹೊನ್ನಾಳಿ : ಪ್ರಗತಿಪರ ರೈತರಿಗೆ ಸನ್ಮಾನ

ಹೊನ್ನಾಳಿ, ಡಿ. 27 - ರಾಷ್ಟ್ರೀಯ ರೈತರ ದಿನಾಚರಣೆ ಅಂಗವಾಗಿ ಪಟ್ಟಣದ ಕೃಷಿ ಇಲಾಖೆ ವತಿಯಿಂದ ಟಿಎಪಿಸಿ ಎಂಎಸ್ ಆವರಣದಲ್ಲಿ ಈಚೆಗೆ ಆಹಾರ ಮತ್ತು ಪೌಷ್ಠಿಕ ಭದ್ರತಾ ಯೋಜನೆಯಡಿ ತರಬೇತಿ ಕಾರ್ಯಕ್ರಮ ಹಾಗೂ ಕಿಸಾನ್ ಗೋಷ್ಠಿ ನಡೆಯಿತು.

ಈ ವೇಳೆ ಕೃಷಿಯಲ್ಲಿ ಸಾಧನೆ ಗೈದ ತಾಲ್ಲೂಕಿನ ಪ್ರಗತಿ ಪರ ರೈತರಾದ ಅಣ್ಣಪ್ಪ, ರಾಜು, ಚನ್ನೇ ಶಪ್ಪ, ಕೆ.ಎನ್. ಪರಮೇಶ್ವರಪ್ಪ ಮತ್ತು ಮೀನಾಕ್ಷಮ್ಮ ಅವರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಹಾಯಕ ಕೃಷಿ ನಿರ್ದೇಶಕಿ ಎ. ಎಸ್. ಪ್ರತಿಮಾ, ರೈತ ಸಂಘದ ಕೆ.ಸಿ ಬಸಪ್ಪ, ಬಣಕಾರ ಬಸಪ್ಪ, ಕರಿಬಸಪ್ಪ, ಜಗದೀಶ, ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸದಸ್ಯ ರುದ್ರನಾಯ್ಕ ಇತರರು ಇದ್ದರು.

# ಬಾಪೂಜಿ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನೃತ್ಯಗೋಷ್ಠಿ



ದಾವಣಗೆರೆ, ಡಿ. 27 - ಇಲ್ಲಿನ ಬಾಪೂಜಿ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಈಚೆಗೆ ಸಾಂಸ್ಕೃತಿಕ ಸಂಸ್ಥೆ ಸ್ಪಿಕ್ ಮ್ಯಾಕೆಯ ಮುಖ್ಯಸ್ಥ ಮಂಜುನಾಥ ರಂಗರಾಜು ನೇತೃತ್ವದಲ್ಲಿ ವಿಶಿಷ್ಟ ನೃತ್ಯ ಗೋಷ್ಠಿ ಜರುಗಿತು.

ನೃತ್ಯ ಗೋಷ್ಠಿಯಲ್ಲಿ ಮಾತನಾಡಿದ ನೃತ್ಯಶ್ರೀ ಸರಿತಾ ಮಿಶ್ರಾ ಅವರು, ದೇಶದಲ್ಲಿ ಅನೇಕ ನೃತ್ಯ ಕಲೆಗಳಿಗೆ, ಇಂತಹ ಅನೇಕ ಕಲೆಗಳಲ್ಲಿ ಓಡಿಸ್ಸಿ ನೃತ್ಯ ವಿಶೇಷವಾಗಿದೆ. ನೀವೂ ಸಹ ಇಂತಹ ನೃತ್ಯಗಳನ್ನು ಕಲಿಯುವ ಮೂಲಕ ಸಂಗೀತ ಕ್ಷೇತ್ರದಲ್ಲಿ ತೊಡಗಿಕೊಳ್ಳಿ ಎಂದು ಹೇಳಿದರು.

ಇದೇ ವೇಳೆ ಅವರು ಒಡಿಸ್ಸಿ ನೃತ್ಯವನ್ನು ಅದ್ಭುತವಾಗಿ ಪ್ರದರ್ಶಿಸಿದರು. ಜತೆಗೆ ವಿವಿಧ ಭಂಗಿಗಳನ್ನು ಪ್ರದರ್ಶಿಸುವ ಮೂಲಕ ವಿದ್ಯಾರ್ಥಿಗಳಿಗೆ ನೃತ್ಯದ ಭಾಗಗಳನ್ನು ಕಲಿಸಿದರು.

ಶಾಲೆಯ ಮುಖ್ಯಸ್ಥ ಮಂಜುನಾಥ ರಂಗರಾಜು ಮಾತನಾಡಿ, ಜಗತ್ತಿನಲ್ಲಿ ಸಂಗೀತ ಮತ್ತು ನೃತ್ಯಕ್ಕೆ ಮನ ಸೋಲದ ವ್ಯಕ್ತಿಯೇ ಇಲ್ಲ. ಇಂತಹ ಕಲೆಯನ್ನು ವಿದ್ಯಾರ್ಥಿಗಳು ಪಠ್ಯದ ಜತೆಗೆ ಇದನ್ನೂ ಕಲಿತು, ನೃತ್ಯ ಕಲೆ ಉಳಿಸುವ ಕಾರ್ಯ ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಚಾರ್ಯೆ ಜೆ.ಎಸ್ ವನಿತಾ, ಶೈಕ್ಷಣಿಕ ಮುಖ್ಯಸ್ಥ ಎಂ. ವಾಸಿಮ್ ಪಾಷಾ, ಪ್ರೌಢಶಾಲಾ ವಿಭಾಗದ ಪ್ರಭಾರಿ ಪಿ.ವಿ. ಪ್ರಭು, ಪ್ರಾಥಮಿಕ ವಿಭಾಗದ ಪ್ರಭಾರಿ ಶೀಭಾರಾಣಿ ಮತ್ತು ವಿದ್ಯಾರ್ಥಿಗಳಿದ್ದರು.

# ಇಂದು ಮೈತ್ರಿವನದಲ್ಲಿ ಅಧ್ಯಯನ ಶಿಬಿರ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು, ಶರಣ ಸಾಹಿತ್ಯ ಪರಿಷತ್ತು ದಾವಣಗೆರೆ ತಾಲ್ಲೂಕು ಘಟಕದ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಯಿಂದ ಹರಿಹರ ಬೈಪಾಸ್ ಹತ್ತಿರದ ಮೈತ್ರಿ ವನದ ಪ್ರೊ. ಬಿ. ಕೃಷ್ಣಪ್ಪ ಸ್ಮಾರಕ ಸಭಾಂಗಣದಲ್ಲಿ 'ಲಿಂಗಾಯತ ಧರ್ಮದ ಇತಿಹಾಸ, ಸಿದ್ಧಾಂತ ಹಾಗೂ ಸಂಘಟನೆ' ಕುರಿತ ಅಧ್ಯಯನ ಶಿಬಿರ ಹಮ್ಮಿಕೊಳ್ಳಲಾಗಿದೆ.

ಸಾಣೇಹಳ್ಳಿ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶರಣ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷ ಎಸ್.ಬಿ. ರುದ್ರಗೌಡ ಗೋಪನಾಳ್ ಅಧ್ಯಕ್ಷತೆ ವಹಿಸಲಿದ್ದಾರೆ.

ವಿಜಯಪುರದ ಶರಣ ಚಿಂತಕ ಡಾ.ಜೆ. ಎಸ್. ಪಾಟೀಲ್ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಾಗತಿಕ ಲಿಂಗಾಯತ ಮಹಾಸಭಾದ ರಾಜ್ಯ ಕಾರ್ಯದರ್ಶಿ ಮಹಾಂತೇಶ್ ಅಗಡಿ, ಜಿಲ್ಲಾಧ್ಯಕ್ಷ ಆವರಗೆರೆ ರುದ್ರಮುನಿ, ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ಲಕ್ಷ್ಮಣ್ ರಾಮವತ್, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಜಾಗತಿಕ ಲಿಂಗಾಯತ ಮಹಾಸಭಾದ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಕುಸುಮಾ ಲೋಕೇಶ್, ಶಸಾಪ ಪ್ರಧಾನ ಕಾರ್ಯದರ್ಶಿ ಬಿ.ಎಂ. ವಿಶ್ವೇಶ್ವರಯ್ಯ ಮತ್ತಿತರರು ಭಾಗವಹಿಸಲಿದ್ದಾರೆ.

# ಬಲಿಷ್ಠ ವೃತ್ತಿ ಜೀವನಕ್ಕೆ ಸೃಜನಶೀಲ ಮನೋಭಾವ ಮುಖ್ಯ

## ಬಿಬಿಎ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಪ್ರಾಧ್ಯಾಪಕಿ ಆರ್. ಸುನೀತ ಅಭಿಮತ



ದಾವಣಗೆರೆ, ಡಿ.27 - ಕೈಗಾರಿಕಾ ತರಬೇತಿಗಳು ಮತ್ತು ಸೃಜನಶೀಲ ಮನೋಭಾವವು ವೃತ್ತಿ ಜೀವನವನ್ನು ಬಲಪಡಿಸಲಿವೆ ಎಂದು ದಾವಣಗೆರೆ ವಿವಿಯ ನಿರ್ವಹಣಾ ಅಧ್ಯಯನ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕಿ ಆರ್. ಸುನೀತ ಹೇಳಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರದ ನಿರ್ವಹಣಾ ಶಾಸ್ತ್ರ ವಿಭಾಗದ ವತಿಯಿಂದ ಕಾಲೇಜಿನ ಸಭಾಂಗಣದಲ್ಲಿ ಈಚೆಗೆ ಆಯೋಜಿಸಿದ್ದ ಪ್ರಥಮ ವರ್ಷದ ಬಿಬಿಎ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಅವರು ಮಾತನಾಡಿದರು.

ಬಿಬಿಎ ಪದವಿಯ ಮೂಲಕ ನಿರ್ವಹಣಾ ಕ್ಷೇತ್ರದಲ್ಲಿ ಉತ್ತಮ ಮಾರ್ಗವನ್ನು ಕಂಡುಕೊಳ್ಳಬಹುದು. ಪ್ರಸ್ತುತ ಕಾಲಘಟ್ಟದಲ್ಲಿ ನಿರ್ವಹಣಾ ತಜ್ಞರಿಗೆ ಉದ್ಯೋಗದಲ್ಲಿ ಬಹುಮುಖ್ಯ ಸ್ಥಾನವಿದೆ ಎಂದು ವಿದ್ಯಾರ್ಥಿಗಳಿಗೆ ಹೇಳಿದರು.

ನಿರ್ವಹಣಾ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎಸ್ ವೆಂಕಟೇಶ್ ಬಾಬು ಮಾತನಾಡಿ, ವಿದ್ಯಾರ್ಥಿಗಳು ಪದವಿ ಹಂತದಲ್ಲೇ ಎಲ್ಲಾ ರೀತಿಯ ಕೌಶಲಗಳನ್ನು ಕಲಿಯಲು ಪ್ರಯತ್ನಿಸಬೇಕು ಎಂದರು.

ಕಾಲೇಜಿನ ಪ್ರಾಚಾರ್ಯ ಬಿ.ಸಿ. ತಹಶೀಲ್ದಾರ್, ಸಹ ಪ್ರಾಧ್ಯಾಪಕಿ ಆರ್. ಯಶೋಧ, ಹಿರಿಯ ಉಪನ್ಯಾಸಕರಾದ ಶಂಕ್ರಯ್ಯ, ರಾಧ, ವೀರೇಶ್, ಡಾ.ಎನ್. ಸೌಜನ್ಯ ಮತ್ತು ಡಾ. ಪ್ರಭಾಕರ್ ಇತರರು ಇದ್ದರು. ವಿದ್ಯಾರ್ಥಿಗಳಾದ ಕೆ.ಎಸ್ ಅಶ್ವಿನಿ ಮತ್ತು ಇ. ಆಕಾಶ್ ನಿರೂಪಿಸಿದರು. ಶಕಿಬ್ ರೆಹಮಾನ್ ವಂದಿಸಿದರು.

# ರಾಷ್ಟ್ರಮಟ್ಟದ ಯುವಜನೋತ್ಸವಕ್ಕೆ ದಾವಿವಿ ವಿದ್ಯಾರ್ಥಿಗಳು ಆಯ್ಕೆ



ದಾವಣಗೆರೆ, ಡಿ. 27 - ದಾವಣಗೆರೆ ವಿಶ್ವವಿದ್ಯಾನಿಲಯದ ಇಬ್ಬರು ವಿದ್ಯಾರ್ಥಿಗಳು ಮುಂಬರುವ ರಾಷ್ಟ್ರೀಯ ಯುವಜನೋತ್ಸವದಲ್ಲಿ ಭಾಗವಹಿಸುವ ಅರ್ಹತೆ ಪಡೆದುಕೊಂಡಿದ್ದಾರೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಕೂಟದ ಅಧ್ಯಕ್ಷ ಪ್ರೊ. ಎಸ್. ಶಿಶುಪಾಲ ತಿಳಿಸಿದ್ದಾರೆ.

ಈಚೆಗೆ ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾನಿಲಯದಲ್ಲಿ ಜರುಗಿದ ಆಗ್ನೇಯ ವಲಯದ ಅಂತರ್ ವಿಶ್ವವಿದ್ಯಾನಿಲಯ ಮಟ್ಟದ ಯುವಜನೋತ್ಸವದಲ್ಲಿ ಭಾಗವಹಿಸಿ ಪೋಸ್ಟರ್ ಮೇಕಿಂಗ್ ವಿಭಾಗದಲ್ಲಿ ಫೈನ್ ಆರ್ಟ್ಸ್ ಕಾಲೇಜಿನ ಸಿದ್ಧಪ್ಪ ಕರಡಗಿ ಪ್ರಥಮ ಸ್ಥಾನ ಪಡೆದಿದ್ದಾರೆ. ಹಾಗೆಯೇ ಕ್ಲೇ ಮಾಡಲಿಂಗ್ ವಿಭಾಗದಲ್ಲಿ ಫೈನ್ ಆರ್ಟ್ಸ್ ಕಾಲೇಜಿನ ವಿನೋದ್ ಆರ್ ಅವರು ತೃತೀಯ ಸ್ಥಾನ ಪಡೆದು ಇಬ್ಬರೂ ವಿದ್ಯಾರ್ಥಿಗಳು 2025 ರಲ್ಲಿ ನಡೆಯುವ ರಾಷ್ಟ್ರೀಯ ಯುವಜನೋತ್ಸವದಲ್ಲಿ ಭಾಗವಹಿಸಲು ಅರ್ಹರಾಗಿದ್ದಾರೆ.

ಇನ್‌ಸ್ಟಾಲೇಷನ್ ವಿಭಾಗದಲ್ಲಿ ವಿನೋದ್, ಅಕ್ಷತಾ ವೆಂಕಟೇಶ್, ವಿನೋದ್ ಆರ್, ಸಂದೀಪ್ ಎಂ ಪಾಟೀಲ್, ಆನ್ ದಿ ಸ್ಪಾಟ್ ಪೇಂಟಿಂಗ್ ವಿಭಾಗದಲ್ಲಿ ಫೈನ್ ಆರ್ಟ್ಸ್ ಕಾಲೇಜಿನ ಐಶ್ವರ್ಯ ಎಸ್. ನಾಲ್ಕನೇ ಸ್ಥಾನ ಪಡೆದಿದ್ದಾರೆ.

ಮೈಮ್ ಸ್ಪರ್ಧೆಯಲ್ಲಿ ಸ್ನಾತಕೋತ್ತರ ಪ್ರಾಣಿಶಾಸ್ತ್ರ ವಿಭಾಗದ ಯು.ಕೆ. ಐಶ್ವರ್ಯ, ಎಂ.ಆರ್. ದೀಪಾ, ನಿವೇದಿತಾ, ಜಯದೇವ ಮತ್ತು ಚೇತನ್ 4ನೇ ಸ್ಥಾನ ಪಡೆದಿದ್ದಾರೆ. ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಆಯ್ಕೆಯಾದ 46 ವಿದ್ಯಾರ್ಥಿಗಳ ತಂಡವನ್ನು ಡಾ. ನಾಗಭೂಷಣ್ ಗೌಡ ಮತ್ತು ಡಾ. ಜ್ಯೋತಿ ಅವರ ನೇತೃತ್ವದಲ್ಲಿ ಯುವಜನೋತ್ಸವಕ್ಕೆ ಕಳುಹಿಸಲಾಗಿತ್ತು.

## ಅತ್ಯಾಚಾರದ ಆರೋಪಿ ಬಿಡುಗಡೆ ಸಲ್ಲದು

**(1ನೇ ಪುಟದಿಂದ)** ನಡೆಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಡಿ.ಜಿ. ಧೋಬ್ಳೆ, ಆರೋಪಿಯಾಗಿರುವ ಚಿತ್ರ ನಿರ್ಮಾಪಕ ವರ್ಸೋವ ಪೊಲೀಸ್ ಠಾಣೆಯಲ್ಲಿ ಶರಣಾಗಬೇಕು ಎಂದು ತಿಳಿಸಿದ್ದಾರೆ.

ಜೈನ್ ಠಾಣೆಗೆ ಬಂದು ಶರಣಾಗದೇ ಇದ್ದರೆ ಬಂಧಿಸಬಹುದು ಎಂದು ತನಿಖಾಧಿಕಾರಿಗೆ ನ್ಯಾಯಾಲಯ ಅನುಮತಿ ನೀಡಿದೆ.


ನವೆಂಬರ್ 21ರ ರಾತ್ರಿ 10 ಗಂಟೆ 56 ನಿಮಿಷಕ್ಕೆ ಆರೋಪಿಯನ್ನು ಬಂಧಿಸಲಾಗಿತ್ತು. ಆದರೆ ಯಾವ ಕಾರಣಕ್ಕಾಗಿ ಬಂಧಿಸಲಾಗಿದೆ ಎಂಬುದನ್ನು 11 ಗಂಟೆಗೆ ತಿಳಿಸಲಾಗಿತ್ತು ಎಂದು ಆರೋಪಿ ಪರ ವಕೀಲರು ವಾದ ಮಂಡಿಸಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ಸೆಷನ್ಸ್ ನ್ಯಾಯಾಲಯ, ಯಾವ ಆಧಾರದ ಮೇಲೆ ಬಂಧಿಸಲಾಗಿದೆ ಎಂಬುದನ್ನು ಆರೋಪಿಗೆ ತಿಳಿಸಲಾಗಿತ್ತು, ಇಲ್ಲಿ ಯಾವ ಸಮಯದಲ್ಲಿ ತಿಳಿಸಲಾಗಿದೆ ಎಂಬುದಷ್ಟೇ ವಿಷಯ. ಬಂಧನದ ತಕ್ಷಣವೇ ಆರೋಪಿಗೆ ಮಾಹಿತಿ ನೀಡಬೇಕು ಎಂದು ಕಾಯ್ದೆಯಲ್ಲಿ ತಿಳಿಸಲಾಗಿದೆ. ಪೊಲೀಸರು ಸಕಾರಣವಾದ ಅವಧಿಯಲ್ಲೇ ಬಂಧನದ ವಿಷಯ ತಿಳಿಸಿದ್ದಾರೆ ಎಂದು ಹೇಳಿದೆ.

## ಸಿಂಗ್ ಮುಂದಿನ ಪೀಳಿಗೆಗೆ ಪಾಠ : ಪ್ರಧಾನಿ ಮೋದಿ

**(1ನೇ ಪುಟದಿಂದ)** ನಿರ್ವಹಿಸಿದ್ದರು. ಪಿ.ವಿ. ನರಸಿಂಹರಾವ್ ನೇತೃತ್ವದ ಸರ್ಕಾರದಲ್ಲಿ ಹಣಕಾಸು ಸಚಿವರಾಗಿ ದೇಶಕ್ಕೆ ಹೊಸ ಆರ್ಥಿಕತೆಯ ದಾರಿ ತೋರಿದ್ದರು ಎಂದು ಮೋದಿ ಹೇಳಿದ್ದಾರೆ. ಪ್ರಧಾನಮಂತ್ರಿಯಾಗಿ ಅವರು ದೇಶದ ಅಭಿವೃದ್ಧಿ ಹಾಗೂ ಪ್ರಗತಿಗೆ ನೀಡಿದ ಕೊಡುಗೆಯನ್ನು ಸದಾ ಸ್ಮರಿಸಲಾಗುವುದು ಎಂದು ಮೋದಿ ತಿಳಿಸಿದ್ದಾರೆ.

# ಮನಮೋಹನ್ ಸಿಂಗ್‌ಗೆ ಜಾಗತಿಕ ನಾಯಕರ ಶ್ರದ್ಧಾಂಜಲಿ



ನವದೆಹಲಿ, ಡಿ. 27 - ಅಗಲಿದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಅಮೆರಿಕಾ, ಕೆನಡಾ ಹಾಗೂ ಫ್ರಾನ್ಸ್ ಸೇರಿದಂತೆ ಹಲವು ದೇಶಗಳ ನಾಯಕರು ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

ನೆರೆ ದೇಶಗಳಾದ ನೇಪಾಳ, ಮಾಲ್ಡೀವ್ಸ್ ಹಾಗೂ ಆಫ್ಘಾನಿಸ್ತಾನ ಸೇರಿದಂತೆ ಹಲವು ದೇಶಗಳ ನಾಯಕರು ಸಿಂಗ್ ಅವರು ನೀಡಿದ ಕೊಡುಗೆ ಹಾಗೂ ಉತ್ತಮ ಸಂಬಂಧಗಳ ಕುರಿತು ಸ್ಮರಿಸಿದ್ದಾರೆ.

ಅಮೆರಿಕಾ ಹಾಗೂ ಭಾರತದ ದ್ವಿಪಕ್ಷೀಯ ಸಂಬಂಧಗಳಿಗೆ ಸಿಂಗ್ ದೊಡ್ಡ ಕೊಡುಗೆ ನೀಡಿದ್ದರು. ಕಳೆದ 2 ದಶಕಗಳಲ್ಲಿ ನಾವು ದ್ವಿಪಕ್ಷೀಯ ಸಂಬಂಧದಲ್ಲಿ ಸಾಧಿಸಿರುವುದಕ್ಕೆ ಅವರು ಅಡಿಪಾಯ ಹಾಕಿದ್ದರು ಎಂದು ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕನ್ ಹೇಳಿದ್ದಾರೆ.

ಆರ್ಥಿಕ ಸುಧಾರಣೆ ಮೂಲಕ ಭಾರತವನ್ನು ವೇಗದ ಆರ್ಥಿಕ ಬೆಳವಣಿಗೆಯ ದಾರಿಗೆ ತಂದಿದ್ದಕ್ಕಾಗಿ ಸಿಂಗ್ ಅವರನ್ನು ಸ್ವದೇಶದಲ್ಲಿ ಸ್ಮರಿಸಬಹುದು. ಅಮೆರಿಕಾ ಮತ್ತು ಭಾರತವನ್ನು ಹತ್ತಿರ ತರುವುದಕ್ಕೆ ಅವರು ನೀಡಿದ ಕೊಡುಗೆಗೆ ನಾವು ಸ್ಮರಿಸುತ್ತೇವೆ ಎಂದವರು ಹೇಳಿದ್ದಾರೆ.

ಫ್ರಾನ್ಸ್ ಅಧ್ಯಕ್ಷ ಎಮ್ಯಾನ್ಯುಯಲ್ ಮೆಕ್ರಾನ್ ಮಾತನಾಡಿ, ಭಾರತ ಶ್ರೇಷ್ಠ ವ್ಯಕ್ತಿಯೊಬ್ಬರನ್ನು ಕಳೆದುಕೊಂಡಿದೆ. ಫ್ರಾನ್ಸ್ ನಿಜವಾದ ಸ್ನೇಹಿತನನ್ನು ಕಳೆದುಕೊಂಡಿದೆ. ಅವರು ದೇಶಕ್ಕಾಗಿ ಜೀವನ ಮುಡಿಪಾಗಿಟ್ಟಿದ್ದರು ಎಂದಿದ್ದಾರೆ.

ಕೆನಡಾದ ಮಾಜಿ ಪ್ರಧಾನಿ ಸ್ಟೀಫನ್ ಹಾರ್ಪರ್ ಮಾತನಾಡಿ, ಸಿಂಗ್ ಅವರು ಮಹಾ ಜ್ಞಾನಿ, ಪ್ರಾಮಾಣಿಕ ಹಾಗೂ ಮೇಧಾವಿಯಾಗಿದ್ದರು. ಅವರ ಅಗಲಿಕೆಯಿಂದ ನೋವಾಗಿದೆ ಎಂದು ಹೇಳಿದ್ದಾರೆ.

ನೇಪಾಳದ ಮಾಜಿ ಪ್ರಧಾನ ಮಂತ್ರಿ ಪುಷ್ಪ ಕಮಲ್ ದಹಲ್ ಪ್ರಚಂಡ ಮಾತನಾಡಿ, ಮನಮೋಹನ್ ಸಿಂಗ್ ಅವರು ದೂರದೃಷ್ಟಿ ನಾಯಕರಾಗಿದ್ದರು. ಹಾಗೂ ಅಸಾಧಾರಣ ಮುತ್ಸದ್ದಿಯಾಗಿದ್ದರು. ಅವರ ಹೆಗ್ಗಳಿಕೆ ಮುಂದಿನ ಪೀಳಿಗೆಗಳಿಗೆ ಸ್ಫೂರ್ತಿಯಾಗಲಿದೆ ಎಂದಿದ್ದಾರೆ.

ಮಾಲ್ಡೀವ್ಸ್ ಮಾಜಿ ಅಧ್ಯಕ್ಷ ಮಹ್ಮದ್ ನಶೀದ್ ಅವರು, ಮಾಜಿ ಪ್ರಧಾನಿ ಸಿಂಗ್ ಅವರು ತಮಗೆ ತಂದೆಯ ರೀತಿ ಇದ್ದರು ಹಾಗೂ ಮಾಲ್ಡೀವ್ಸ್‌ನ ಉತ್ತಮ ಸ್ನೇಹಿತರಾಗಿದ್ದರು ಎಂದಿದ್ದಾರೆ.

ಶ್ರೀಲಂಕಾ ಮಾಜಿ ಅಧ್ಯಕ್ಷ ಮಹಿಂದಾ ರಾಜಪಕ್ಷ ಮಾತನಾಡಿ, ಸಿಂಗ್ ಅವರು ದೂರದೃಷ್ಟಿಯ ಅರ್ಥಶಾಸ್ತ್ರಜ್ಞರಾಗಿದ್ದರು. ಹಾಗೂ ಭಾರತದ ಆರ್ಥಿಕ ಉದಾರೀಕರಣದ ರೂವಾರಿಯಾಗಿದ್ದರು ಎಂದಿದ್ದಾರೆ.

## ಭಾಷಣ ಸ್ಪರ್ಧೆಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ



ದಾವಣಗೆರೆ, ಡಿ. 27 - ಶ್ರೀ ಸೋಂದ ಸ್ವರ್ಣವಲ್ಲಿ ಮಹಾಸಂಸ್ಥಾನ ಹಾಗೂ ಶ್ರೀ ಸರ್ವಜ್ಞೇಂದ್ರ ಸರಸ್ವತಿ ಪ್ರತಿಷ್ಠಾನದ ವತಿಯಿಂದ ಏರ್ಪಡಿಸಿದ್ದ ಶ್ರೀ ಭಗವದ್ಗೀತಾ ಅಭಿಯಾನ ಕರ್ನಾ ಟಕ 2024ರ ವಿವಿಧ ಸ್ಪರ್ಧೆಗಳಲ್ಲಿ ನಗರದ ಶ್ರೀ ಸೋಮೇಶ್ವರ ವಿದ್ಯಾಲ ಯದ ವಿದ್ಯಾರ್ಥಿಗಳು ಭಾಗವಹಿಸಿ ದ್ದರು. ಭಗವದ್ಗೀತಾ ಕಂಠಪಾಠ ಸ್ಪರ್ಧೆಯ ಕಿರಿಯರ ವಿಭಾಗದಲ್ಲಿ ಕೌಸ್ತುಬ್ ಪ್ರಥಮ ಸ್ಥಾನ ಶ್ರೇಯಸ್ ದ್ವಿತೀಯ ಹಾಗೂ ಸುಧನ್ವ ಶರ್ಮ ತೃತೀಯ ಬಹುಮಾನವನ್ನು ತಮ್ಮದಾಗಿಸಿಕೊಂಡಿದ್ದಾರೆ. ಕೌಸ್ತುಬ್ ಹಾಗೂ ಶ್ರೇಯಸ್ ರಾಜ್ಯ ಮಟ್ಟದ ಭಗವದ್ಗೀತಾ ಸ್ಪರ್ಧೆಗೆ ಆಯ್ಕೆಗೊಂಡಿದ್ದಾರೆ. ಹಿರಿಯರ ವಿಭಾಗದಲ್ಲಿ ದೀಪ ತೃತೀಯ ಸ್ಥಾನವನ್ನ ಪಡೆದುಕೊಂಡಿದ್ದಾರೆ.

ಕಿರಿಯರ ವಿಭಾಗದ ಭಾಷಣ ಸ್ಪರ್ಧೆಯಲ್ಲಿ ಕೆ. ಪೂರ್ವಿತಾ ತೃತೀಯ ಬಹುಮಾನವನ್ನು ತಮ್ಮದಾಗಿಸಿಕೊಂಡಿದ್ದಾರೆ. ಹಿರಿಯರ ವಿಭಾಗದಲ್ಲಿ ಗೌತಮಿ ದ್ವಿತೀಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಗೊಂಡಿದ್ದಾರೆ. ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿ, ನಗದು ಬಹುಮಾನವನ್ನು ನೀಡಿ ಸನ್ಮಾಸಲಾಯಿತು.

## ದಾವಣಗೆರೆ ವಿವಿ ನೆಟ್‌ಬಾಲ್ ಪಂದ್ಯ: ಜಿಎಂಎಸ್ ಅಕಾಡೆಮಿ ಸಾಧನೆ

ದಾವಣಗೆರೆ, ಡಿ. 27 - ನಗರದ ಜಿಎಂಎಸ್ ಅಕಾಡೆಮಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ತಂಡವು ದಾವಣಗೆರೆ ವಿಶ್ವವಿದ್ಯಾನಿಲಯ ನೆಟ್‌ಬಾಲ್ ಪಂದ್ಯಾವಳಿ 2024 ರಲ್ಲಿ ಭಾಗವಹಿಸಿ ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದು ಕ್ರೀಡಾ ಸಾಧನೆ ಮೆರೆದಿದ್ದಾರೆ.

ಇತ್ತೀಚಿಗೆ ಚಿತ್ರದುರ್ಗದ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಈ ಪಂದ್ಯಾವಳಿಯಲ್ಲಿ ರಾಕೇಶ್ ವೈ ಎಸ್(3ನೇ ಬಿಎಸ್ಸಿ), ಮಯೂರ್ ಎಸ್ ಕೆ (3ನೇ ಬಿಕಾಂ), ಶಶಿಧರ್ (3ನೇ ಬಿಕಾಂ), ಚರಣ್ ಟಿ ಎಂ(3ನೇ ಬಿಎಸ್ಸಿ), ಮೋಹನ್ ಕೆಎಂ(2ನೇ ಬಿಕಾಂ), ಅಜಯ್ ಕುಮಾರ್ ಡಿ ಎನ್(3ನೇ ಬಿಸಿಎ), ಮಧು ಎಂ(2ನೇ ಬಿಕಾಂ), ಧನುಷ್ ಗೌಡ ಡಿ(2ನೇ ಬಿಸಿಎ), ಸಾಹಿಲ್ ಎ ಸಿ(2ನೇ ಬಿಎಸ್ಸಿ) ಜಿಎಂಎಸ್ ಅಕಾಡೆಮಿ ವಿದ್ಯಾರ್ಥಿಗಳ ತಂಡ ದ್ವಿತೀಯ ಸ್ಥಾನದ ಬಹುಮಾನವನ್ನು ಪಡೆದುಕೊಂಡಿದೆ.

ಜಿಎಂಎಸ್ ಅಕಾಡೆಮಿ ಬಾಲಕಿಯರ ತಂಡದ ತೇಜಸ್ವಿನಿ ಎ(3ನೇ ಬಿಕಾಂ), ತನ್ವಿ ಎನ್ ಗುಪ್ತಾ(3ನೇ ಬಿಕಾಂ), ದಿಯಾಶ್ರೀ ಎಸ್ ಎಸ್(3ನೇ ಬಿಕಾಂ), ತೇಜಸ್ವಿನಿ ಎನ್(3ನೇ ಃಅಂ), ಕ್ಷೇಮ ಕೋನ ಃ(3ನೇ ಃಅಂ), ಧನುಶ್ರೀ (3ನೇ ಬಿಕಾಂ), ರಕ್ಷಿತಾ ಟಿ ಪಿ(2ನೇ ಬಿಸಿಎ), ಕರ್ಣಶ್ರೀ ಎಸ್ ಎಸ್(3ನೇ ಬಿಕಾಂ), ಭೂಮಿಕಾ ಕೆಬಿ(3ನೇ ಬಿಸಿಎ) ತೃತೀಯ ಸ್ಥಾನ ತಮ್ಮದಾಗಿಸಿಕೊಂಡಿದ್ದಾರೆ.



## ಕೆ. ಬೇವಿನ ಹಳ್ಳಿಯಲ್ಲಿ ರಥೋತ್ಸವ

ಮಲೇಬೆನ್ನೂರು, ಡಿ. 27 - ಸುಕ್ಷೇತ್ರ ಕಾಶಿ ಬೇವಿನಹಳ್ಳಿ ಗ್ರಾಮದಲ್ಲಿ ಶ್ರೀ ಮಹೇಶ್ವರ ಸ್ವಾಮಿಯ ಜಾತ್ರೆ ಅಂಗವಾಗಿ ಶ್ರೀ ರೇವಣ ಸಿದ್ದೇಶ್ವರ ಸ್ವಾಮಿ ಮತ್ತು ಶ್ರೀ ಬಸವೇಶ್ವರ ಸ್ವಾಮಿ ಹಾಗೂ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ರಥೋತ್ಸವವು ಬುಧವಾರ ರಾತ್ರಿ ಸಂಭ್ರಮದಿಂದ ಜರುಗಿತು. ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಹೆಚ್.ಎಸ್. ಶಿವ ಶಂಕರ್, ಮಾಜಿ ಮೇಯರ್ ಅಜಯಕುಮಾರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ರಾಣೇಬೆನ್ನೂರು : 'ಬಿಸಿನೆಸ್ ಐಡಿಯಾ' ಸ್ಪರ್ಧೆಯಲ್ಲಿ ಖನ್ನೂರ ವಿದ್ಯಾನಿಕೇತನ ಪ್ರಥಮ



ರಾಣೇಬೆನ್ನೂರು, ಡಿ. 27 - ದಾವಣಗೆರೆಯ ಬಾಪೂಜಿ ಕಾಮರ್ಸ್ ಕಾಲೇಜ್‌ನಲ್ಲಿ ಈಚೆಗೆ ಏರ್ಪಡಿಸಲಾಗಿದ್ದ 'ವಾಣಿಜ್ಯೋತ್ಸವ-2024'ರಲ್ಲಿ 'ಬಿಸಿನೆಸ್ ಐಡಿಯಾ' ಸ್ಪರ್ಧೆಯಲ್ಲಿ ಇಲ್ಲಿನ ಖನ್ನೂರ ವಿದ್ಯಾನಿಕೇತನ ವಾಣಿಜ್ಯ ವಿಭಾಗದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಾದ ಆಕಾಶ ಕೋಪರ್ಡೆ, ಮಹಮ್ಮದ್ ರಾಹಿಲ್ ಮತ್ತು ಮಹಮ್ಮದ್ ಸಲೀಂ ಅವರುಗಳು ಪ್ರಥಮ ಸ್ಥಾನ ಪಡೆದಿದ್ದಾರೆ.

# ಉಗ್ರ ದಾಳಿ ನಂತರ ಸೈನಿಕ ಕಾರ್ಯಾಚರಣೆ ಬಗ್ಗೆ ಮಾತನಾಡಿದ್ದ ಮನಮೋಹನ್

**(1ನೇ ಪುಟದಿಂದ)** 13ರಂದು ಮುಂಬೈನ ಬೇರೆ ಬೇರೆ ತಾಣಗಳಲ್ಲಿ ಸರಣಿ ಸ್ಫೋಟಗಳನ್ನು ನಡೆಸಲಾಗಿತ್ತು. ಈ ಸ್ಫೋಟಗಳಲ್ಲಿ 26 ಜನ ಸಾವನ್ನಪ್ಪಿದ್ದರು ಹಾಗೂ 130 ಜನ ಗಾಯಗೊಂಡಿದ್ದರು.

ಈ ದಾಳಿಯ ನಂತರದಲ್ಲಿ ಕ್ಯಾಮರಾನ್ ಅವರು ಸಿಂಗ್ ಭೇಟಿ ಮಾಡಿದ್ದರು. ಈ ಭೇಟಿಯ ವಿವರಗಳನ್ನು ಕ್ಯಾಮರಾನ್ ಅವರು ತಮ್ಮ ಫಾರ್ ದ ರೆಕಾರ್ಡ್ ಪುಸ್ತಕದಲ್ಲಿ ತಿಳಿಸಿದ್ದಾರೆ. 2019ರಲ್ಲಿ ಈ ಪುಸ್ತಕ ಬಿಡುಗಡೆ ಮಾಡಲಾಗಿತ್ತು.

ನಾನು ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರನ್ನು ಅವರ ಜೊತೆ ಉತ್ತಮವಾಗಿ ಬೆರೆತಿದ್ದೇನೆ. ಅವರು ಸಂತನಂತಹ ವ್ಯಕ್ತಿ. ಆದರೆ ಭಾರತ ಎದುರಿಸುತ್ತಿರುವ ಬೆದರಿಕೆಯ ಬಗ್ಗೆ ಅವರಿಗೆ ಚೆನ್ನಾಗಿ ತಿಳಿದಿತ್ತು.

ಜುಲೈ 2011ರಂದು ಮುಂಬೈನಲ್ಲಿ ನಡೆದ ದಾಳಿಯ ರೀತಿಯ ಮತ್ತೊಂದು ದಾಳಿ ನಡೆದರೆ ನಾವು ಪಾಕಿಸ್ತಾನದ ವಿರುದ್ಧ ಸೈನಿಕ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸಿಂಗ್ ತಮ್ಮ ಬಳಿ ಹೇಳಿದ್ದರು ಎಂದು ಕ್ಯಾಮರಾನ್ ತಿಳಿಸಿದ್ದಾರೆ.

# 5 ಮೀಸಲಾತಿ ಪಾಲನೆ ಕಡ್ಡಾಯವಾಗಲಿ: ಆರತಿ



**(1ನೇ ಪುಟದಿಂದ)** ಬಲವಾಗಬೇಕಿದೆ ಎಂದು ತಿಳಿಸಿದರು. ಜಗಳೂರಿನ ಮಹಾಂತೇಶ ಬ್ರಹ್ಮ ಮಾತನಾಡಿ, ವಿಕಲತೆ ಶಾಪವು ಅಲ್ಲ. ವರವೂ ಅಲ್ಲ. ಭಗವಂತ ಅವರಲ್ಲೂ ಪ್ರತಿಭೆ ಸೃಷ್ಟಿಸಿರುತ್ತಾನೆ. ಪ್ಯಾರಾ ಒಲಂಪಿಕ್ಸ್‌ನಲ್ಲಿ ದೇಶದ ವಿಶೇಷ ಚೇತನರು ಮಾಡಿದ ಸಾಧನೆಯೇ ಇದಕ್ಕೆ ಸಾಕ್ಷಿ ಎಂದು ಹೇಳಿದರು.

ಈ ವೇಳೆ ರಾಜ್ಯದ 45 ಜನ ವಿಶೇಷ ಸಾಧನಾ ಪುರಸ್ಕೃತರನ್ನು ಸನ್ಮಾನಿಸಲಾಯಿತು. ಹಾಗೂ 5 ವಿಶೇಷ ಆದರ್ಶ ದಂಪತಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಹೀಮೋಫಿಲಿಯಾ ಕೇಂದ್ರದ ಅಧ್ಯಕ್ಷ ಡಾ. ಸುರೇಶ್ ಹನಗವಾಡಿ, ಸುರೇಶ್ ಭಂಡಾರಿ, ಸಬಿಯಾ ಬೇಗಂ ಮರ್ತೂರ, ಡಾ. ಪುಷ್ಪಲತಾ, ರಶ್ಮಿ ದೇಶಮುಖ್, ಬಿ.ಎಂ ಮಲ್ಲೇಶ್, ವಿಜಯಲಕ್ಷ್ಮೀ, ಪೋತಲ್ ಶ್ರೀನಿವಾಸ್ ಮತ್ತಿತರರಿದ್ದರು.

## ಹದಡಿ ರಸ್ತೆ ಬೀದಿ ಬದಿಯ ವ್ಯಾಪಾರಸ್ಥರ ತೆರವು: ತೀವ್ರ ಅಸಮಾಧಾನ

ದಾವಣಗೆರೆ, ಡಿ. 27 - ನಗರದ ಹದಡಿ ರಸ್ತೆಯ ಬೀದಿ ಬದಿಯ ವ್ಯಾಪಾರಸ್ಥರನ್ನು ಏಕಾಏಕಿ ತೆರವುಗೊಳಿಸಿದ್ದು, ಇದರಿಂದ ಸಣ್ಣ ಪುಟ್ಟ ಬೀದಿ ಬದಿ ವ್ಯಾಪಾರಿಗಳಿಗೆ ತುಂಬಾ ತೊಂದರೆಯಾಗಿದೆ ಎಂದು ಜಿಲ್ಲಾ ಬೀದಿ ಬದಿಯ ಸ್ಥಿರ ಮತ್ತು ಸಂಚಾರಿ ಚಿಲ್ಲರೆ ವ್ಯಾಪಾರಸ್ಥರ ಕ್ಷೇಮಾಭ್ಯಿದ್ಧಿ ಸಂಘದ ಜಿಲ್ಲಾಧ್ಯಕ್ಷ ಎಸ್. ಇಸ್ಮಾಯಿಲ್ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾನಗರ ಪಾಲಿಕೆ ಗುರುತಿಸಿರುವಂತೆ 13000 ಬೀದಿ ಬದಿಯ ವ್ಯಾಪಾರಿಗಳು ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಬೀದಿ ಬದಿಯಲ್ಲಿ ವ್ಯಾಪಾರಸ್ಥರನ್ನು ಏಕಾಏಕಿಯಾಗಿ ತೆರವುಗೊಳಿಸಿದೆ. ಇದರಿಂದ ಸಣ್ಣಪುಟ್ಟ ಬೀದಿ ಬದಿ ವ್ಯಾಪಾರಸ್ಥರಿಗೆ ತೊಂದರೆಯಾಗಿದೆ. ಇದಕ್ಕೆ ಪಾಲಿಕೆಯು ಕೆಲ ಕಾರಣಗಳನ್ನು ನೀಡಿದ್ದಾರೆ. ಹದಡಿ ರಸ್ತೆ, ಶಾಮನೂರು ರಸ್ತೆ ಹಾಗೂ ಡೆಂಟಲ್ ಕಾಲೇಜು ರಸ್ತೆಗೆ ಸಂಬಂಧಪಟ್ಟಂತೆ ಹೇಕೋರ್ಟ್ ನ ಲೋಕಾಯುಕ್ತರಿದಂದ ಪಾಲಿಕೆ ವಿರುದ್ಧ ಕೇಸ್ ದಾಖಲಾಗಿದ್ದು, ಇದಕ್ಕೆ ಅಲ್ಲಿರುವ ವ್ಯಾಪಾರಸ್ಥರನ್ನು ತೆರವುಗೊಳಿಸಲು ಅನಿವಾರ್ಯ ಎಂದಿದ್ದಾರೆ. ಆದರೆ ಯಾವುದೇ ಮುನ್ಸೂಚನೆ ನೀಡದೆ ಹಾಗೂ ಬಹುಮುಖ್ಯವಾಗಿ ಒಕ್ಕಲೆಬ್ಬಿಸುವ ಕ್ರಮ ಕೈಗೊಳ್ಳಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಎಸ್.ಕೆ. ರೆಹಮತ್‌ವುಲ್ಲಾ, ಕೆ. ಭಾರತಿ, ಡಿ. ಮಂಜುಳಾ, ಅಲ್ಲಾಬಕ್ಷಿ, ಧರ್ಮಣ್ಣ, ಮಂಜುನಾಥ ಕೈದಾಳೆ ಮತ್ತಿತರರಿದ್ದರು.

## ಶ್ರೀ ಮಲ್ಲಿಕಾರ್ಜುನ, ಕಂಠಿದುರ್ಗಮ್ಮ ದೇವಸ್ಥಾನದಲ್ಲಿ ಕಡೇ ಕಾರ್ತಿಕೋತ್ಸವ



ದಾವಣಗೆರೆ, ಡಿ. 27 - ಕೆ.ಟಿ.ಜೆ.ನಗರದ 10ನೇ ತಿರುವಿನಲ್ಲಿರುವ ಶ್ರೀ ಮಲ್ಲಿಕಾರ್ಜುನ ಹಾಗೂ ಶ್ರೀ ಕಂಠಿದುರ್ಗಮ್ಮ ದೇವಸ್ಥಾನ ಕಡೇ ಕಾರ್ತಿಕೋತ್ಸವ ಎರಡು ದಿನಗಳ ಕಾಲ ಕಡೇ ಕಾರ್ತಿಕೋತ್ಸವವು ವಿಜೃಂಭಣೆಯಿಂದ ನಡೆಯಿತು. ಕೆ.ಟಿ.ಜೆ. ನಗರದ ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಕೆ.ಪಿ.ಸಿ.ಸಿ. ಎಸ್ಸಿ ವಿಭಾಗದ ಕಾರ್ಯದರ್ಶಿ ಸೋಮಲಾಪುರದ ಹನುಮಂತಪ್ಪ ಕಾರ್ಯಕ್ರಮ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಯಮನೂರು ಗೌಡ್ರು, ಕುಷ್ಠಗಿ ರಮೇಶ್, ಅಜಯ್ ಲಕ್ಕಪ್ಪ, ಪುರದಾಳ್ ಶಾಂತಕುಮಾರ್, ಕಾಳಪ್ಪ ಮಣ್ಣೂರು, ಹೆಚ್.ವೈ. ಪ್ರದೀಪ್, ದೇವರಾಜ್ ವಂದಾಲಿ ಹಾಗೂ ಇತರರು ಭಾಗವಹಿಸಿದ್ದರು.

## ಮನಮೋಹನ್ ಸಿಂಗ್ ಶ್ರೇಷ್ಠ ಮುತ್ಸದ್ಧಿ, ವಿಶಿಷ್ಟ ನಾಯಕ : ಕೇಂದ್ರ ಸಂಪುಟದಿಂದ ಶ್ರದ್ಧಾಂಜಲಿ

ನವದೆಹಲಿ, ಡಿ. 27 - ಅಗಲಿದ ಮಾಜಿ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರಿಗೆ ಕೇಂದ್ರ ಸಂಪುಟ ಶ್ರದ್ಧಾಂಜಲಿ ಸಲ್ಲಿಸಿದ್ದು, ಸಿಂಗ್ ಶ್ರೇಷ್ಠ ಮುತ್ಸದ್ಧಿ ಹಾಗೂ ವಿಶಿಷ್ಟ ನಾಯಕರಾಗಿದ್ದಾರೆ. ಅವರು ರಾಷ್ಟ್ರದಲ್ಲಿ ತಮ್ಮ ಗುರುತು ಬಿಟ್ಟುಹೋಗಿದ್ದಾರೆ ಎಂದು ತಿಳಿಸಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಸಿಂಗ್ ಅವರಿಗೆ ಎರಡು ನಿಮಿಷ ಮೌನ ಶ್ರದ್ಧಾಂಜಲಿ ಸಲ್ಲಿಸಲಾಗಿದೆ ಹಾಗೂ ಅಗಲಿದ ನಾಯಕನಿಗೆ ಶ್ರದ್ಧಾಂಜಲಿ ಸಲ್ಲಿಸುವ ನಿರ್ಣಯ ಜಾರಿಗೊಳಿಸಲಾಗಿದೆ.

ಸಿಂಗ್ ಅಗಲಿಕೆಯಿಂದಾಗಿ ದೇಶ ಶ್ರೇಷ್ಠ ಮುತ್ಸದ್ದಿ, ಹೆಸರಾಂತ ಅರ್ಥಶಾಸ್ತ್ರಜ್ಞ ಹಾಗೂ ವಿಶಿಷ್ಟ ನಾಯಕರೊಬ್ಬರನ್ನು ಕಳೆದುಕೊಂಡಿದೆ ಎಂದು ಸಂಪುಟದ ನಿರ್ಣಯದಲ್ಲಿ ತಿಳಿಸಲಾಗಿದೆ. ಕೇಂದ್ರ ಸರ್ಕಾರ ಸಿಂಗ್ ನಿಧನದ ಹಿನ್ನೆಲೆಯಲ್ಲಿ 7 ದಿನಗಳ ಶೋಕಾಚರಣೆ ಪ್ರಕಟಿಸಿದೆ.


**ಸೈಟು, ಮನೆ & ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಶಿವ-ಪಾರ್ವತಿಯಲ್ಲಿ 30x50 ಪೂರ್ವ 40x52 ಪಶ್ಚಿಮ-ಉತ್ತರ ಕಾರ್ನರ್, 40x60 ಪೂರ್ವ 40 ಅಡಿ ರಸ್ತೆಗೆ ಬನಶಂಕರಿಯಲ್ಲಿ (ಹೊಸ) 40x70 ಪಶ್ಚಿಮ 30x57 ಪೂರ್ವ ಸರ್ಕಾರಿ ನೌಕರರ ಬಡಾವಣೆಯಲ್ಲಿ 30x40 ಪೂರ್ವ 30x51 ಉತ್ತರ, 30x50 ಉತ್ತರ ಹಳೆ ಬಾತಿ & ಹೊಸ ಬಾತಿ ಮಧ್ಯ 28 ಗುಂಟೆ ಜಮೀನು ಮಾರಾಟಕ್ಕೆ, ಸೈಟುಗಳು ಸೇರಿ ಮಾರಾಟಕ್ಕಿವೆ. ಸಂಪರ್ಕಿಸಿ: (ಪ್ರಾಪರ್ಟಿ ಅಡ್ವೈಸರ್) ಸುರೇಶ್ ಪಿ.ಎಸ್. ಶಾಮನೂರು
ಮೊ: 84314 00907

**ಸೈಟುಗಳು ಮಾರಾಟಕ್ಕಿವೆ**
ಶಕ್ತಿನಗರ 40x60 North, ಆಂಜನೇಯ ಬಡಾವಣೆ 30x50 North, 30x57 South ಸರಸ್ವತಿ ನಗರ 30X50 North ಬನಶಂಕರಿ ಬಡಾವಣೆ 30x50 North, 30x60East (40 ಅಡಿ ರಸ್ತೆ)
95385 65909

**ಜಮೀನು ಬೇಕಾದಲ್ಲಿ ಸಂಪರ್ಕಿಸಿ**
ದಾವಣಗೆರೆ ತಾ. ಕೋಳೇನಹಳ್ಳಿಯಲ್ಲಿ ಎಕರೆ 8 ಗುಂಟೆ 23 ಜಮೀನು ಮಾರಾಟಕ್ಕೆ ಇದೆ. (ಕೆಂಪು ಮಣ್ಣು ಖಾಲಿ ಹೊಲ ನೀರಾವರಿ. ಸಂತೆಬೆನ್ನೂರಲ್ಲಿ ಎಕರೆ 8 ಗುಂಟೆ 20 ಇದರಲ್ಲಿ 4 ಎಕರೆ ಅಡಿಕೆ ಇದೆ. 2 ವರ್ಷದ್ದು, ಇನ್ನೂ 4 1/2 ಎಕರೆ ಖಾಲಿ ಇದೆ. ಈ ಜಮೀನು ಮಾರಾಟಕ್ಕೆ ಇದೆ. ಸಂಪರ್ಕಿಸಿ : ಪ್ರಾಪರ್ಟಿ ಅಡ್ವೈಸರ್ ಸುರೇಶ್ ಪಿ.ಎಸ್. ಶಾಮನೂರು.
ಮೊ : 84314 00907

**ಬೇಕಾಗಿದ್ದಾರೆ**
ವೀರಶೈವ ಖಾನಾವಳಿಯಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಬೇಕಾಗಿದ್ದಾರೆ.
99017 70830
99458 29046

**ಸೈಟು ಮಾರಾಟಕ್ಕಿದೆ**
30x30 ದಕ್ಷಿಣ, 30x35 ಉತ್ತರ, ಹೊಸ ಸರ್.ಎಂ.ವಿ. ಕಾಲೇಜ್ ಹಿಂಭಾಗ. ಸಂಪರ್ಕಿಸಿ :
83106 43453
70266 11468

**ಸೈಟು ಮಾರಾಟಕ್ಕಿದೆ**
30x40 ಉತ್ತರ, ಹೊಸ ಸರ್.ಎಂ.ವಿ. ಕಾಲೇಜ್ ಹಿಂಭಾಗ.
98454 62129

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸುಶಿ ಕನ್‌ವೆನ್ಷನ್ ಹಾಲ್ ಹಿಂಭಾಗ ಹೊಸ ಬಡಾವಣೆಗಳಲ್ಲಿ 30x50 ಉತ್ತರ, 30x40 ಪಶ್ಚಿಮ, 30x50 ಪೂರ್ವ, 30x50 ಉತ್ತರ-ಪಶ್ಚಿಮ ಕಾರ್ನರ್.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**WANTED**
* Marketing Executive
* Accountant
* godown Incharge
63620 23451,
97434 37003

**WANTED TEACHERS**
Hindi teacher 1- Post
Kannada teacher 1 - Post
Any Graduate 1 - Post.
contact:
99801 48289, 87468 95680

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**SINGAPORE MALAYSIA**
7 Days Premium Group Tour. from 7th FEB
Rs 104900/- pp
Contact : 99006 66122
DVG WORLD TOURS, PJ Extn Davanagere.

**HOUSE TO LET**
3 BHK#3101/2, 9th main, 2nd cross, MCC "B" block, Davangere.
98443 52144
94810 32484

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 40x70 ಪೂರ್ವ, ಜೈನ್ ಸ್ಕೂಲ್ ಹಿಂಭಾಗ 30x55 ಪಶ್ಚಿಮ, 30x40 ಪಶ್ಚಿಮ ಅಕ್ಕ-ಪಕ್ಕ, 30x50 ಉತ್ತರ-ಪಶ್ಚಿಮ ಕಾರ್ನರ್, 40x70 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**Avoid Mosquitoes**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ ESI & PF ವ್ಯವಸ್ಥೆ ಇರುತ್ತದೆ.
ಸಂಬಳ 9000/- to 10,000/-
90362 37886

**ಓದುಗರ ಗಮನಕ್ಕೆ**

**ಗೋದಾಮುಗಳು ಬಾಡಿಗೆಗೆ**
ನಗರದ KSRTC ಬಸ್ ಸ್ಟ್ಯಾಂಡ್ ಎದುರು, APMC ಮಾರ್ಕೆಟ್ ಪಕ್ಕದಲ್ಲಿರುವ ದಾವಣಗೆರೆ ಎಣ್ಣೆ ಸಂಕೀರ್ಣ (KOF) ನಲ್ಲಿ ವಿವಿಧ ಅಳತೆಯ ಗೋದಾಮುಗಳು ಬಾಡಿಗೆಗೆ ಲಭ್ಯವಿರುತ್ತವೆ.
9600 ಚ.ಅ. ಮತ್ತು 4800 ಚ.ಅ.
ಗೋದಾಮಿನ ಪ್ರದೇಶವು CCTV ಕ್ಯಾಮರ ಹಾಗೂ ಭದ್ರತಾ ವ್ಯವಸ್ಥೆ ಇರುತ್ತದೆ. ಗೋದಾಮುಗಳು ಕೃಷಿ ಉತ್ಪನ್ನಗಳ ಸರಕುಗಳು ಹಾಗೂ ಇತರೆ ಹಾಳಾಗದ ಸರಕುಗಳ ಶೇಖರಣೆಗೆ ಸೂಕ್ತವಾಗಿವೆ.
87625 88632

**FLAT FOR LEASE**
3 BHK, Sqft : 1888
AM Apartment
Nainika Prime Rose
Vidyanagar Last city bus stop Davangere.
89519 38228, 80502 22181

**ನೇರ ಪರೀಕ್ಷೆ ಕಟ್ಟಲು ಅರ್ಜಿ ಆಹ್ವಾನ**
SSLC ನೇರ ಪರೀಕ್ಷೆ, ಶಾಲೆ ಬಿಟ್ಟಿದ್ದೀರಾ ?
7, 8, 9 ಪಾಸ್/ ಫೇಲ್ 10th ಫೇಲ್ /ಗೈರುಹಾಜರಿ (ಮಾನ್ಯತೆ ಪಡೆದ ಪರೀಕ್ಷಾ ಕೇಂದ್ರ) (ದಾವಣಗೆರೆ/ಹೂವಿನಹಡಗಲಿ) (ಉನ್ನತ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಕ್ಕೆ ಹಾಗೂ ಮುಂಬಡ್ತಿ ಪಡೆಯಲು ಉಪಯೋಗ)
2nd PUC/ Senior Secondary
ARTS/ COMMERCE/SCIENCE
NTC/BA, B.Com., B.Sc., MA, M.Com, M.Sc, MBA
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿ.
HOLYFAITH CORRESPONDENCE COLLEGE
B1- ಹೊಸ ಆರ್‌ಟಿಓ ಆಫೀಸ್ ಎದುರು, ದಾವಣಗೆರೆ.
B2 - ಜೀಜಾಮಾತಾ ಕಾಲೋನಿ, ಹರಿಹರ ದಾವಣಗೆರೆ.
7349397287, 9741746205

**ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ**
ಟೆಲಿಕಾಲಿಂಗ್ ಮತ್ತು ಅಕೌಂಟೆಂಟ್ ಬೇಕಾಗಿದ್ದಾರೆ. ಸಂಪರ್ಕಿಸಿ :
72046 17344

**ಸಿಂಗಾಪುರ್, ಮಲೇಶಿಯಾ**
7th ಫೆಬ್ರವರಿ & 7 ದಿನ ಪ್ರವಾಸ
ರೂ. 104900/- pp
ಸಂಪರ್ಕಿಸಿ: 99006 66122
ಡಿವಿಜಿ ವರ್ಲ್ಡ್ ಟೂರ್
ಪಿ ಜೆ ಬಡಾವಣೆ, ದಾವಣಗೆರೆ.

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಸಣ್ಣ ವ್ಯಾಪಾರ**
ಮೊಬೈಲ್ ಮೂಲಕ ನಿಮ್ಮ ಬಿಡುವಿನ ವೇಳೆಯಲ್ಲಿ ತರಬೇತಿಯನ್ನು ಪಡೆದು ಪ್ರತಿವಾರ ಅಧಿಕ ಆದಾಯ ಪಡೆಯಲು ಇಚ್ಛೆ ಇರುವವರು ಇಂದೇ ಸಂಪರ್ಕಿಸಿ
84969 57469

**WANTED**
Computer Operater
Female Only.
Salary - 10000/-
78929 94180

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿರಿ :
94484 39639

**ಮನೆ ಮಾರಾಟಕ್ಕಿದೆ**
#1, 356/10'C' ಸವಣೂರ ಪ್ಲಾಜಾ ಹಿಂಭಾಗ, ಪಿ.ಬಿ. ರೋಡ್, ದಾವಣಗೆರೆ, 60+55/2x40=2300, ಅಡಿ ವಿಸ್ತೀರ್ಣದಲ್ಲಿ ಕಟ್ಟಿರುವ ಗ್ರೌಂಡ್ ಫ್ಲೋರ್ ಮನೆ ಮಾರಾಟಕ್ಕಿದೆ. 1 ಕೋಟಿ, 30 ಲಕ್ಷಕ್ಕೆ
9742261666, 94498 96502

**ಜಮೀನು ಮಾರಾಟಕ್ಕಿದೆ**
ಜನರಲ್ ಪ್ರಾಪರ್ಟಿ 2 ಎಕರೆ ಖಾಲಿ ಹೊಲ, NH4 ನಿಂದ 3ನೇ ಹೊಲ, ಹುಣಸೇಕಟ್ಟೆ ಗ್ರಾಮ, ಹೆಬ್ಬಾಳು ಟೋಲ್‌ನಿಂದ 2 ಕಿಮೀ, ದಾವಣಗೆರೆ.
82176 55264, 87926 56289

**ಮನೆ ಬಾಡಿಗೆಗೆ ಇದೆ**
3 BHK ಡಬಲ್ ಡುಪ್ಲೆಕ್ಸ್, 20x20 ಉತ್ತರ, 40 ಅಡಿ. ಸೋಲಾರ್, ಬೋರ್‌ವೆಲ್ ಎಲ್ಲಾ ಕನ್ವಿನೆಂಟ್. ಸಿರಿ ನಿಲಯ, ದೇವರಾಜ್ ಅರಸ್ ಬಡಾವಣೆ, ಬಿ ಬ್ಲಾಕ್, ಡೋರ್ ನಂ. 276/2 only for rent.
98449 45322

**ಸೈಟುಗಳು ಮಾರಾಟಕ್ಕಿವೆ**
ಪುಟಗನಾಳು ಗ್ರಾಮದಲ್ಲಿ ಪಂಚಾಯಿತಿ ಡೋರ್ ನಂಬರ್, ಫೈನಲ್ ಅಪ್ರೂವಲ್ ಮತ್ತು ದೂಡ ಅಪ್ರೂವಲ್, ಹೊಸ ಔಟರ್ ರಿಂಗ್ ರೋಡ್‌ನಿಂದ ಕೇವಲ 1.5 km ದೂರದಲ್ಲಿರುವ ಸೈಟ್‌ಗಳು ಮಾರಾಟಕ್ಕಿವೆ. 1 ಅಡಿಗೆ 1050 ರೂ. ಗಳು ಮಾತ್ರ.
8618343463, 86187 28546

**ಬೇಕಾಗಿದ್ದಾರೆ**
ಅನುಭವವುಳ್ಳ ಸೇಲ್ಸ್ ಮನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ಸ್ ಸ್ಯಾರಿ ಸೆಂಟರ್, ಬಿನ್ನಿ ಕಂಪನಿ ರಸ್ತೆ, ದಾವಣಗೆರೆ

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿಳಾಸ : ಸಪ್ತಗಿರಿ ಸ್ಕೂಲ್ ಹತ್ತಿರ, ಕುಂದವಾಡ ರೋಡ್.
83103 14540

# ಆರ್ಥಿಕ ಬಿಕ್ಕಟ್ಟು ಮೆಟ್ಟಿ ನಿಂತ ಆರ್ಥಿಕ ತಜ್ಞ ಅಸ್ತಂಗತ: ವಿನಯ್ ಕುಮಾರ್ ಸಂತಾಪ

ದಾವಣಗೆರೆ,ಡಿ. 27- ಭಾರತ ದೇಶದ ಎರಡು ಬಾರಿ ಪ್ರಧಾನಿಯಾಗಿದ್ದ ಡಾ. ಮನಮೋಹನ್ ಸಿಂಗ್ ಕೊಡುಗೆ ಅಪಾರ. ಹತ್ತು ವರ್ಷಗಳ ಅಧಿಕಾರಾವಧಿ ಯಲ್ಲಿ ಮಹಾಮೌನಿಯಾಗಿ ಮಾಡಿದ ಅಭಿವೃದ್ಧಿ ಕಾರ್ಯಗಳು, ಕೈಗೊಂಡ ಯೋಜ ನೆಗಳು ಮನಮೋಹನ್ ಸಿಂಗ್ ಅವರ ದೂರದೃಷ್ಟಿತ್ವಕ್ಕೆ ಸಾಕ್ಷಿ ಎಂದು ಸ್ವಾಭಿಮಾನಿ ಬಳಗದ ಸಂಸ್ಥಾಪಕ ರಾಜ್ಯಾಧ್ಯಕ್ಷ ಜಿ. ಬಿ. ವಿನಯ್ ಕುಮಾರ್ ಹೇಳಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಮನಮೋಹನ್ ಸಿಂಗ್ ಅವರು ಗ್ರಾಮೀಣಾಭಿವೃದ್ಧಿ ಕೈಗೊಂಡ ಕಾರ್ಯಗಳು ಅಪಾರ. ಪೊಲೀಯೋ ಸಂಪೂರ್ಣ ನಿರ್ಮೂಲನೆ ಆಗಿದ್ದೇ ಈ ಕಾಲದಲ್ಲಿ. ಬಾಲ್ಯ ವಿವಾಹ ನಿಷೇಧ ಕಾಯ್ದೆ, ಅರಣ್ಯ ರಕ್ಷಣೆ ಹಕ್ಕು ಕಾಯ್ದೆ, ಮಹಾತ್ಮಾಗಾಂಧಿ ಗ್ರಾಮೀಣ ಯೋಜನೆ, ಮಾಹಿತಿ ಹಕ್ಕು ಕಾಯ್ದೆ, ಅಮೆರಿಕಾ ನಾಗರಿಕ ಪರಮಾಣು ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಭಾರತದ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಿದ ಮಹಾನ್ ನಾಯಕ ಎಂದು ಸಂತಾಪ ಸೂಚಕ ಸಂದೇಶದಲ್ಲಿ ತಿಳಿಸಿದ್ದಾರೆ.

ದೇಶದ 60 ಸಾವಿರ ಕೋಟಿ ರೈತರ ಸಾಲ ಮನ್ನಾ ಮಾಡುವ ಮೂಲಕ ರೈತರ ಪಾಲಿನ ಆಶಾಕಿರಣವಾಗಿದ್ದರು. ಮಹಾತ್ಮಾಗಾಂಧಿ ಗ್ರಾಮೀಣ ಉದ್ಯೋಗ ಯೋಜನೆ, 2005ರಲ್ಲಿ ಜಾರಿಗೆ ತಂದ ಮಾಹಿತಿ ಹಕ್ಕು ಕಾಯ್ದೆ, ಲೋಕಪಾಲ್, ಆಹಾರ ಭದ್ರತಾ ಕಾಯ್ದೆ, 2009ರಲ್ಲಿ ಶಿಕ್ಷಣ ಹಕ್ಕು ಕಾಯ್ದೆ ಜಾರಿಗೊಳಿಸಿದ ಮನಮೋಹನ್ ಸಿಂಗ್ ಅವರು ಆರ್ಥಿಕ, ಶೈಕ್ಷಣಿಕ, ಸಾಮಾಜಿಕವಾಗಿ ದೇಶದ ಕೋಟ್ಯಂತರ ಜನರಿಗೆ ಶಕ್ತಿ ತುಂಬಿದವರು ಎಂದು ಹೇಳಿದ್ದಾರೆ.

ಮನಮೋಹನ್ ಸಿಂಗ್ ಅವರ ನಡೆ, ನುಡಿ, ವ್ಯಕ್ತಿತ್ವ, ಬೆಳೆದು ಬಂದ ಬದುಕು ಎಲ್ಲರಿಗೂ ಆದರ್ಶಮಯ. ಬಡವರು, ದಲಿತರು, ಹಿಂದುಳಿದ, ಅಲ್ಪಸಂಖ್ಯಾತ ವರ್ಗ ಸೇರಿದಂತೆ ಎಲ್ಲಾ ವರ್ಗದವರ ಆಶಾಕಿರಣವಾಗಿ ಯೋಜನೆ ರೂಪಿಸಿದ್ದು, ಐತಿಹಾಸಿಕ ಕ್ರಮಗಳು ಇಂದಿಗೂ ಮಾತನಾಡುತ್ತಿವೆ. ಇಂಥ ಮಹಾನ್ ಮುತ್ಸದ್ಧಿ, ಆರ್ಥಿಕ ತಜ್ಞ, ಅಪರೂಪದ ರಾಜಕಾರಣಿ ಮತ್ತೆ ಸಿಗುವುದಿಲ್ಲ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಜಿ. ಬಿ. ವಿನಯ್ ಕುಮಾರ್ ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

# ಹರಿಹರ : ಕೃಷಿಕ ಸಮಾಜದ ಅಧ್ಯಕ್ಷರಾಗಿ ಹನಗವಾಡಿಯ ಸಾರಥಿ ಮಂಜುನಾಥ್, ಜಿಲ್ಲಾ ಪ್ರತಿನಿಧಿಯಾಗಿ ಬೆಳ್ಳೂಡಿ ರುದ್ರೇಶ್ ಆಯ್ಕೆ



ಮಲೇಬೆನ್ನೂರು, ಡಿ. 27- ಹರಿಹರ ತಾ. ಕೃಷಿಕ ಸಮಾಜದ ನೂತನ ಅಧ್ಯಕ್ಷರಾಗಿ ಹನಗವಾಡಿಯ ಸಾರಥಿ ಮಂಜುನಾಥ್ ಗುರುವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಮಲ್ಲನಾಯ್ಕನಹಳ್ಳಿಯ ಎಸ್. ಮಂಜುನಾಥ್, ಪ್ರಧಾನ ಕಾರ್ಯದರ್ಶಿಯಾಗಿ ಕುಂಬಳೂರಿನ ಎಸ್.ಜಿ. ನಾಗರಾಜಪ್ಪ, ಖಜಾಂಚಿಯಾಗಿ ನಿಟ್ಟೂರಿನ ಶ್ರೀಮತಿ ಉಷಾ ಎನ್.ಜಿ. ಶಿವಾಜಿ ಪಾಟೀಲ್ ಮತ್ತು ಜಿಲ್ಲಾ ಪ್ರತಿನಿಧಿಯಾಗಿ ಬೆಳ್ಳೂಡಿಯ ಕೆ.ವಿ. ರುದ್ರೇಶ್ ಅವಿರೋಧವಾಗಿ ಆಯ್ಕೆಯಾಗಿ ದ್ದಾರೆಂದು ಚುನಾವಣಾಧಿಕಾರಿಗಳಾದ ಸಹಾಯಕ ಕೃಷಿ ನಿರ್ದೇಶಕ ಎ. ನಾರನಗೌಡ ಪ್ರಕಟಿಸಿದ್ದಾರೆ.

ನೂತನ ಸದಸ್ಯರಾದ ಬೆಳ್ಳೂಡಿಯ ಮಾಗನೂರು ಹನುಮಂತಪ್ಪ, ಹನಗವಾಡಿಯ ಸಿ. ತಿಪ್ಪಣ್ಣ, ಕೆ. ರೇವಣಸಿದ್ದಪ್ಪ, ಬಣಕಾರ ಪ್ರಸನ್ನ, ಕೆಂಚನಹಳ್ಳಿಯ ಕೆ.ಜಿ. ನಾರಪ್ಪ, ಕುಂಬಳೂರಿನ ಹಳೆಮನೆ ಶಂಭುಲಿಂಗಪ್ಪ, ಎಸ್.ಜಿ. ನಿಂಗರಾಜ್, ಕೊಂಡಜ್ಜಿಯ ವೀರಭದ್ರಪ್ಪ, ಹೊಳೆಸಿರಿಗೆರೆಯ ಎಸ್. ಅಂಜನ್‌ಕುಮಾರ್ ಕೂಡ ಈ ಹಿಂದೆಯೇ ಅವಿರೋಧವಾಗಿ ಆಯ್ಕೆಯಾಗಿದ್ದರು.

# ಚನ್ನಗಿರಿ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷ ಕೆ.ಸಿದ್ಧಲಿಂಗಪ್ಪ

ಸಂತೇಬೆನ್ನೂರು, ಡಿ. 27 - ದಣಿವರಿಯದ ಕನ್ನಡ ಪರಿಚಾರಕ ಕೆ. ಸಿದ್ದಲಿಂಗಪ್ಪ. 86 ರ ಇಳಿ ವಯಸ್ಸಿನಲ್ಲೂ ಕನ್ನಡ ನಾಡು, ನುಡಿ ಬಗ್ಗೆ ಅಪಾರ ಕಾಳಜಿ. ಕನ್ನಡದ ಕೆಲಸಗಳಿಗೆ ಉತ್ಸಾಹದ ಚಿಲುಮೆ. ಗ್ರಾಮೀಣ ಭಾಗದಲ್ಲಿ ಶಿಕ್ಷಣ, ಕ್ರೀಡೆ, ಕಲೆ, ಸಂಸ್ಕೃತಿ, ಇತಿಹಾಸ ಸಂರಕ್ಷಣೆಗೆ ಪ್ರಾಮಾಣಿಕವಾಗಿ ದುಡಿದಿದ್ದಾರೆ.

ಸರ್ಕಾರಿ ಶಾಲಾ ಶಿಕ್ಷಕರಾಗಿ ವೃತ್ತಿ ಆರಂಭಿಸಿ ಮೂರು ದಶಕಗಳಿಗೂ ಅಧಿಕ ಸಾವಿರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ಸಂತೇಬೆನ್ನೂರಿನ ಎಸ್ ಎಸ್ ಜೆವಿಪಿ ಸರ್ಕಾರಿ ಪ್ರೌಢಶಾಲೆಯಲ್ಲಿಯೇ 1997 ರಲ್ಲಿ ನಿವೃತ್ತರಾಗಿದ್ದಾರೆ. ಗ್ರಾಮದಲ್ಲಿ ಯುವಕರಿದ್ದಾಗಲೇ ಸತ್ಯನಾರಾಯಣ ನಾಡಿಗ್ ಮಾರ್ಗದರ್ಶನದಲ್ಲಿ 1960 ರಲ್ಲೇ ವಿಜಯ ಸಮೂಹ ಶಿಕ್ಷಣ ಸಂಸ್ಥೆ ಆರಂಭಿಸಿ ಸಂಸ್ಥಾಪಕ ಕಾರ್ಯದರ್ಶಿಯಾಗಿ ಇಂದಿಗೂ ಫಲಾಪೇಕ್ಷೆ ಇಲ್ಲದೇ ಸೇವೆ ಸಲ್ಲಿಸುತ್ತಿದ್ದಾರೆ.



ಅನೇಕ ಕವನ, ಲೇಖನ ಬರೆದರೂ ಪುಸ್ತಕ ರೂಪದಲ್ಲಿ ತರಲು ಮುಂದಾಗಿಲ್ಲ. ಕವಿಗೋಷ್ಠಿ, ಆಕಾಶವಾಣಿ, ದೂರದರ್ಶನ ಕವಿತೆ ವಾಚನ ಮಾಡಿದ್ದಾರೆ. ಸ್ಥಳೀಯ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದಿದ್ದಾರೆ. ಇವರ ಕನ್ನಡ ಸೇವೆ ಗುರುತಿಸಿ 'ವಿಜಯ ಯುವಕ ಸಂಘ ಪ್ರಕಟಿಸಿರುವ 'ಕನ್ನಡ ಪರಿಚಾರಕರು' ಎಂಬ ಪುಸ್ತಕದಲ್ಲಿ ಲೇಖನ ಬರೆದಿದ್ದಾರೆ. ಕನ್ನಡ ಸೇವೆಯನ್ನು ಅನೇಕ ಅಭಿಮಾನಿಗಳು ಲೇಖನದ ಮೂಲಕ ಗುಣಗಾನ ಮಾಡಿದ್ದಾರೆ.

ಕನ್ನಡವೇ ನನ್ನ ಉಸಿರು ಎಂಬ ಸಾಕ್ಷಿ ಪ್ರಜ್ಞೆಯಲ್ಲಿ 'ಒಬ್ಬ ಕನ್ನಡಿಗ ಒಂದು ರೂಪಾಯಿ' ದೇಣಿಗೆ ಸಂಗ್ರಹಿಸಿ ಸಾಹಿತ್ಯ ಪರಿಷತ್ತಿಗೆ ನೀಡಿದ್ದಾರೆ. ತಾಲ್ಲೂಕಿನಾದ್ಯಂತ ಸುತ್ತಾಡಿ ನೂರಾರು ಆಜೀವ ಸದಸ್ಯರನ್ನು ನೊಂದಾಯಿಸಿದ್ದಾರೆ.20 ರಿಂದ 30 ದತ್ತಿ ಸ್ಥಾಪನೆಗೆ ಕಾರಣರಾಗಿದ್ದಾರೆ. ಚನ್ನಗಿರಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಸತತ ಕನ್ನಡ ಕಾರ್ಯಕ್ರಮಗಳನ್ನು ನಿಯೋಜಿಸಿದ್ದಾರೆ. ಇಂದಿಗೂ ಕನ್ನಡದಲ್ಲಿಯೇ ಪತ್ರ ವ್ಯವಹಾರ ನಡೆಸುವ ಪರಿಪಾಠ ಇದೆ.

ಅನೇಕ ಏಕಾಂಕ ಹಾಗೂ ವೃತ್ತಿ ರಂಗಭೂಮಿಯಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. 12 ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಸಂಘಟಿಸಿ ನಡಸಿದ್ದಾರೆ. ನಾಡಿನ ಹಿರಿಯ, ಕಿರಿಯ ಸಾಹಿತಿಗಳು ಆಹ್ವಾನಿಸುವ ಮೂಲಕ ಪರಿಚಯಿಸಿದ್ದಾರೆ. ಎಲ್ಲಾ ಸಾಹಿತ್ಯ ಸಮ್ಮೇಳನಗಳಲ್ಲಿ ಗೋಷ್ಠಿಗಳನ್ನು ತಪ್ಪದೇ ಗ್ರಹಿಸಿದ್ದಾರೆ. ಕನ್ನಡ ವಿರೋಧಿ ಚಟುವಟಿಕೆಗಳನ್ನು ನಿರ್ಭೀತಿಯಿಂದ ಖಂಡಿಸಿದ್ದಾರೆ.

ಚನ್ನಗಿರಿ ತಾಲ್ಲೂಕು ಶಿವಮೊಗ್ಗ ಜಿಲ್ಲೆಗೆ ಸೇರಿದ್ದಾಗ 1997 ರಲ್ಲಿ ಜಿಲ್ಲಾ ಉತ್ತಮ ಪ್ರಶಸ್ತಿ, ದಾವಣಗೆರೆ ಜಿಲ್ಲಾ ಗ್ರಾಮೀಣ ಸಿರಿ ಪ್ರಶಸ್ತಿ, 2024 ರಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

# ಗಿಡ-ಮರ ಬೆಳೆಸದಿದ್ದರೆ ಮನುಷ್ಯ ಕುಲಕ್ಕೆ ಆಪತ್ತು ಕೃಷಿ ಉತ್ಸವದಲ್ಲಿ ಪಂಡಿತಾರಾಧ್ಯ ಸ್ವಾಮೀಜಿ ಎಚ್ಚರಿಕೆ



ದಾವಣಗೆರೆ, ಡಿ. 25 - ಗಿಡ ಮರ ಬೆಳೆಸದಿದ್ದರೆ ಮನುಷ್ಯ ಕುಲಕ್ಕೆ ಆಪತ್ತು ಎಂದು ಸಾಣೆಹಳ್ಳಿ ಪಂಡಿತಾರಾಧ್ಯ ಶಿವಚಾರ್ಯ ಡಾ. ಸ್ವಾಮೀಜಿ ಎಚ್ಚರಿಸಿದ್ದಾರೆ.

ತಾಲ್ಲೂಕಿನ ಕಬ್ಬೂರು ಗ್ರಾಮದಲ್ಲಿ ಲಿಂ. ಕೆ.ವಿ. ಗಂಗಾಧರಪ್ಪ ಅವರ ಸ್ಮರಣೆಗಾಗಿ ಬುಧವಾರ ಆಯೋಜಿಸಿದ್ದ ಕೃಷಿ ಉತ್ಸವ ಹಾಗೂ ಕಾಯಕ ಜೀವಿ ಸ್ಮರಣೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮರ-ಗಿಡಗಳು ಅಶುದ್ಧ ಗಾಳಿ ಹೀರಿಕೊಂಡು ಶುದ್ಧ ಗಾಳಿ ನೀಡುತ್ತವೆ. ಶುದ್ಧ ಗಾಳಿ ಹೀರಿಕೊಂಡು ಅಶುದ್ಧ ಗಾಳಿ ಬಿಡುವ ಮನುಷ್ಯರು ಮರಗಿಡ ಬೆಳೆಸಲು ಆಸಕ್ತಿ ತೋರಿಸುತ್ತಿಲ್ಲ. ಇಂಥ ಮನೋಭಾವ ಮುಂದುವರೆದರೆ ಕೆಲವೇ ವರ್ಷಗಳಲ್ಲಿ ಮನುಷ್ಯ ಆಮ್ಲಜನಕ ಸಿಲಿಂಡರ್ ಬೆನ್ನ ಮೇಲೆ ಹೊತ್ತು ಬದುಕಬೇಕಾದ ದುಸ್ಥಿತಿ ಬರಬಹುದು ಎಂದು ಆತಂಕ ವ್ಯಕ್ತಪಡಿಸಿದರು.

ಇದೇ ಕಾರ್ಯಕ್ರಮದಲ್ಲಿ 'ಹಸಿರೆಲೆಯ ಉಸಿರು ಗಂಗಣ್ಣ' ಕೃತಿ ಬಿಡುಗಡೆ ಮಾಡಿದ ಸ್ವಾಮೀಜಿ, ನೂರಾರು ಸಾಲು ಮರ ಬೆಳೆಸಿದ್ದ ಲಿಂ. ಕೆ.ವಿ. ಗಂಗಾಧರಪ್ಪ ಅವರು ಇಂದು ಮಾದರಿಯಾಗಿದ್ದಾರೆ. ಮುಂದೊಂದು ದಿನ ಆಮ್ಲಜನಕ ಕೊರತೆಯಿಂದ ಮನುಷ್ಯ ಮತ್ತು ಜೀವಿಗಳಿಗೆ ತೊಂದರೆ ಆಗಬಾರದೆಂಬ ದೂರ ದೃಷ್ಟಿ ಗಂಗಣ್ಣ ಅವರಲ್ಲಿ ಕಾಣುತ್ತದೆ ಎಂದು ಪ್ರಶಂಸಿಸಿದರು.

ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಮಾತನಾಡಿ, ಕೃಷಿಯ ಜೊತೆ ಪರಿಸರ ಪ್ರೀತಿ ಬೆಳೆಸಿಕೊಳ್ಳುವುದು ಅಪರೂಪದ ಸಂಗತಿ. ಕೃಷಿಯೇ ಇವತ್ತು ಹಲವರಿಗೆ ಕಷ್ಟಕರವಾಗಿದೆ. ಇಂಥದ್ದರಲ್ಲಿ ಗಂಗಣ್ಣ ಅವರು ಸಸಿ ನೆಟ್ಟು ನೀರು ಹಾಕಿ ಜೋಪಾನ ಮಾಡಿರುವುದು ಶ್ಲಾಘನೀಯ. ಗಂಗಣ್ಣ ಅವರ ಪರಿಶ್ರಮದಿಂದ ನೂರಾರು ಮರಗಳು ಇಲ್ಲಿ ಬೆಳೆದು ಪರಿಸರ ಪಾಠ ಮಾಡುತ್ತಿವೆ ಎಂದು ಹೇಳಿದರು.

ರಾಷ್ಟ್ರೀಯ ತೋಟಗಾರಿಕೆ ಪ್ರಶಸ್ತಿ ಪುರಸ್ಕೃತ ಹೆದ್ನೆ ಗ್ರಾಮದ ಎಚ್.ಬಿ. ಮುರುಗೇಂದ್ರಪ್ಪ ಮಾತನಾಡಿ, ಅಪರೂಪದ ಬೆಳೆಗಳನ್ನು ತೋಟಗಾರಿಕೆಯಲ್ಲಿ ಅಂತರ್ ಬೆಳೆಯಾಗಿ ಬೆಳೆದರೆ ಉತ್ತಮ ಲಾಭ ಕಾಣಬಹುದು. ರೈತರು ಬುದ್ಧಿವಂತರಾಗಿ ತೋಟಗಾರಿಕೆ ಮಾಡಿದರೆ ಯಾವುದೇ ಸಾಲ ಇಲ್ಲದೆ ಉತ್ತಮ ಜೀವನ ನಡೆಸಬಹುದು ಎಂದರು.

ದಾವಣಗೆರೆ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಶ್ರೀಧರ ಮೂರ್ತಿ ಡಿ.ಎಂ. ಮಾತನಾಡಿ, ಕ್ರಿಮಿನಾಶಕ ಹಾಗೂ ರಾಸಾಯನಿಕ ಗೊಬ್ಬರ ಬಳಕೆಯಿಂದ ಮನುಷ್ಯ ಅನೇಕ ರೋಗಗಳಿಂದ ನರಳುತ್ತಿದ್ದಾನೆ. ಮಂಡಿ ಮತ್ತು ಬೆನ್ನು ನೋವು ಈಗ ಸಾಮಾನ್ಯವಾಗಿದೆ. ಬಿ.ಪಿ. ಶುಗರ್ ಕಾಯಿಲೆ ಇಲ್ಲದ ಕುಟುಂಬಗಳೇ ಇಲ್ಲ ಎನ್ನುವಂತಾಗಿದೆ. ಇದಕ್ಕೆಲ್ಲಾ ಕಾರಣ ಸಂಪ್ರದಾಯಿಕ ಸಿರಿಧಾನ್ಯ ಬಿಟ್ಟು ಹೈಬ್ರಿಡ್ ಧಾನ್ಯಗಳ ಮೊರೆ ಹೋಗಿರುವುದು ಕಾರಣ. ಇನ್ನು ಮುಂದೆ ನೈಜ ಕೃಷಿಗೆ ಹೆಚ್ಚು ಬೆಲೆ ಬರಲಿದೆ ಎಂದರು.

ಆನಗೋಡು ರೈತ ಹುತಾತ್ಮ ಸಮಿತಿ ಅಧ್ಯಕ್ಷ ಎನ್.ಜಿ. ಪುಟ್ಟಸ್ವಾಮಿ ಮಾತನಾಡಿ, ರೈತ ಕೂಡ ಪರಿಸರ ಪ್ರಜ್ಞೆ ರೂಢಿಸಿಕೊಂಡು ಸಾಲು ಮರ ಬೆಳೆಸಿರುವುದು ಅಪರೂಪದ ಸಂಗತಿ. ಇಂಥ ಪ್ರವೃತ್ತಿಗಳನ್ನು ಯುವಜನರು ಬೆಳೆಸಿಕೊಳ್ಳಬೇಕು. ಕೃಷಿಯಲ್ಲಿ ಕೂಲಿ ಆಳು ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ. ಆಧುನಿಕ ತಂತ್ರಜ್ಞಾನ ಇದಕ್ಕೆ ನೆರವಾಗಬೇಕಿದೆ ಎಂದರು.

ನಿವೃತ್ತ ಮುಖ್ಯ ಶಿಕ್ಷಕ ಎ.ಕೆ. ಮಲ್ಲೇಶಪ್ಪ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಪಿ. ಪಾಲಾಕ್ಷಿ, ಮಾಜಿ ಸೈನಿಕರಾದ ಪ್ರಭು ಎಚ್.ಬಿ., ಎಂ. ಸಿದ್ದಪ್ಪ, ಡಿ.ಎಚ್. ಮಹಾದೇವಪ್ಪ, ಬಿ.ಬಿ. ರಾಜಪ್ಪ, ಆಶಾ ಕಾರ್ಯಕರ್ತೆಯರಾದ ಎಂ.ಕೆ.ತಿಪ್ಪಮ್ಮ, ಆರ್.ಎನ್. ಶಶಿಕಲಾ ಅವರನ್ನು ಸನ್ಮಾನಿಸಲಾಯಿತು.

ರೈತ ಸಂಘದ ಮುಖಂಡರಾದ ಹೊನ್ನೂರು ಮುನಿಯಪ್ಪ, ಆವರಗೆರೆ ರುದ್ರಮುನಿ ಉಪಸ್ಥಿತರಿದ್ದರು.

ಹಿರಿಯ ಪತ್ರಕರ್ತ ಮಲ್ಲಿಕಾರ್ಜುನ್ ಕಬ್ಬೂರು ಪ್ರಸ್ತಾವಿಕವಾಗಿ ಮಾತನಾಡಿದರು. ಡಾ. ಆಶಾ ನಾಗರಾಜ್ ಕಬ್ಬೂರು ನಿರೂಪಿಸಿ, ಭೂಮೇಶ್ ಕಬ್ಬೂರು ವಂದಿಸಿದರು

**42 ಯುವಕರ ರಕ್ತದಾನ :** ಲಿಂ. ಕೆ.ವಿ. ಗಂಗಾಧರಪ್ಪ ಸ್ಮರಣೆ ಅಂಗವಾಗಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಕಬ್ಬೂರು ಹಾಗೂ ಸುತ್ತಮುತ್ತಲ ಗ್ರಾಮದ 42 ಯುವಕರು ರಕ್ತದಾನ ಮಾಡಿದರು.

ದಾವಣಗೆರೆ ಸಿ.ಜಿ. ಆಸ್ಪತ್ರೆ ರಕ್ತ ಭಂಡಾರ ವಿಭಾಗದ ಸಿಬ್ಬಂದಿ ರಕ್ತ ಸಂಗ್ರಹ ಮಾಡಿದರು. ಕೊಡಗನೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ. ಮಂಜುನಾಥ್ ಹಾಗೂ ಎಸ್.ಎಸ್. ಕೇರ್ ಟ್ರಸ್ಟ್ ವೈದ್ಯರು ಸಹ ಆರೋಗ್ಯ ತಪಾಸಣೆ ಮಾಡಿದರು.

## ವೃತ್ತಿ ಪ್ರವೃತ್ತಿ ಡಾ ಬಿ.ಹೆಚ್. ವೀರಪ್ಪನವರ ಅಭಿನಂದನಾ ಗ್ರಂಥ ಲೋಕಾರ್ಪಣೆ



ದಾವಣಗೆರೆ, ಡಿ. 27 - ಇಲ್ಲಿನ ನಿವೃತ್ತ ಶಿಕ್ಷಕ ಹಾಗೂ ಮಾಜಿ ಕಮಾಂಡೆಂಟ್ ಡಾ. ಬಿ.ಹೆಚ್. ವೀರಪ್ಪನವರ ಪುತ್ರಿ ವಿವಾಹ ಸಂಧರ್ಭದ ಆರತಕ್ಷತೆ ಸಮಾರಂಭದಲ್ಲಿ ಡಾ. ಬಿ.ಹೆಚ್. ವೀರಪ್ಪನವರ ಅಭಿನಂದನಾ ಗ್ರಂಥವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಲಿಂಗರಾಜ ಬಿಡುಗಡೆ ಮಾಡಿ ದರು .

ಹಿರಿಯ ಕಲಾವಿದರು ಹಾಗೂ ನಿವೃತ್ತ ಕಮಾಂಡೆಂಟ್ ಮಹಲಿಂಗಪ್ಪ ಅಭಿನಂದನಾ ಗ್ರಂಥ ಸಂಪಾದನೆಯಲ್ಲಿ ದಾವಣಗೆರೆ ಕಲಾಪರಿಷತ್ತು ಹಾಗೂ ಅಭಿಮಾನಿ ಬಳಗದವರು ಪ್ರಕಟಿಸಿದ್ದರು. ಕಾರ್ಯಕ್ರಮದಲ್ಲಿ ಡಾ. ಸುಜಿತ್ ಕುಮಾರ್ ಉಪಸ್ಥಿತರಿದ್ದರು.

ಶ್ರೀಮತಿ ಸರಸ್ವತಿ ಡಾ. ವೀರಪ್ಪ ಸ್ವಾಗತಿಸಿದರು. ಶ್ರೀಮತಿ ಸುಮತಿ ಜಯಪ್ಪ ನಿರೂಪಿಸಿದರು. ಕೊನೆಯಲ್ಲಿ ಡಾ. ವೀರಪ್ಪ ವಂದಿಸಿದರು. ಕಾರ್ಯಕ್ರಮಕ್ಕೂ ಮುನ್ನ ಶ್ರೀಮತಿ ಉಮಾ ಮತ್ತು ಜಗನ್ ಇವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

## ಮನಮೋಹನ್‌ಸಿಂಗ್ ನಿಧನಕ್ಕೆ ಸಂತಾಪ

ದಾವಣಗೆರೆ, ಡಿ. 27- ಆರ್.ಎಂ.ಸಿ. ಲಿಂಕ್ ರಸ್ತೆ (ಶೇಖರಪ್ಪ ನಗರ ಮಾರ್ಗ) ಯಲ್ಲಿರುವ ದಾವಣಗೆರೆ ಜಿಲ್ಲಾ ಟೈಲ್ಸ್, ಗ್ರಾನೆಟ್ ಹಾಗೂ ಮಾರ್ಬಲ್ ಕೂಲಿಕಾರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸಂಘದ ಕಚೇರಿಯಲ್ಲಿ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ನಿಧನದ ಪ್ರಯುಕ್ತ ಒಂದು ನಿಮಿಷ ಮೌನ ಆಚರಣೆ ಆಚರಿಸಲಾಯಿತು.

ಜಿಲ್ಲಾ ಅಧ್ಯಕ್ಷರಾದ ಮುರುಗನ್ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾರ್ಮಿಕರು, ಸಂಘದ ಎಲ್ಲಾ ಪದಾಧಿಕಾರಿಗಳು ಹಾಗೂ ಕೂಲಿ ಕಾರ್ಮಿಕರು ಭಾಗವಹಿಸಿದ್ದರು.

# ಜಯಪ್ರಕಾಶ್ ಗೌಡರ ಹಗುರ ಹೇಳಿಕೆಗೆ ವಾಮದೇವಪ್ಪ ಖಂಡನೆ

ದಾವಣಗೆರೆ ಡಿ. 27- ಹಾವೇರಿ ಜಿಲ್ಲೆಯಲ್ಲಿ ಜರುಗಿದ 86ನೇ ಅಖಿಲ ಭಾರತ ಕನ್ನಡ ಸಮ್ಮೇಳನ ಮತ್ತು ಮಂಡ್ಯದಲ್ಲಿ ಮೊನ್ನೆ ತಾನೆ ಜರುಗಿದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳ ಬಗ್ಗೆ ಮಡ್ಯದ ಜಯಪ್ರಕಾಶ್ ಗೌಡರು ಹಗುರವಾಗಿ ಮಾತನಾಡಿರುವುದು ಅತ್ಯಂತ ದುರುದ್ದೃಷ್ಟಕರ ಹಾಗೂ ಖಂಡನೀಯವಾದದ್ದು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಪತ್ರಿಕಾ ಪ್ರಕಟಣೆ ಮೂಲಕ ಖಂಡಿಸಿದ್ದಾರೆ.

ಈ ಎರಡು ಸಮ್ಮೇಳನಗಳಲ್ಲಿ ಭಾಗವಹಿಸಿದ್ದ ಲಕ್ಷಾಂತರ ಜನರು ಸಾಹಿತ್ಯ ಸಮ್ಮೇಳನವು ಅತ್ಯಂತ ಅರ್ಥಪೂರ್ಣವಾಗಿತ್ತು ಹಾಗೂ ವ್ಯವಸ್ಥಿತವಾಗಿತ್ತು ಎಂಬುದನ್ನು ತುಂಬ ಮನಸ್ಸಿನಿಂದ ಕೊಂಡಾಡಿರುವ ದೃಶ್ಯ ಹಾಗೂ ಮುದ್ರಣ ಮಾಧ್ಯಮಗಳ ಮೂಲಕ ಯಶಸ್ಸಿನ ಬಗ್ಗೆ ಪ್ರಸಂಶನೀಯವಾದ ವರದಿಗಳು ಬಂದಿದ್ದರೂ ಸಹ ಈ ಎರಡು ಸಮ್ಮೇಳನಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸದೇ ಇದ್ದರೂ ಮಂಡ್ಯದ ಜಯಪ್ರಕಾಶ್ ಗೌಡರವರು ಹಗುರ ಮಾತುಗಳನ್ನು ಆಡುವುದರ ಮೂಲಕ ಈ ಸಮ್ಮೇಳನಗಳಲ್ಲಿ ಭಾಗವಹಿಸಿದವರಿಗೆ ಮತ್ತು ಪ್ರಶಂಸೆ ವ್ಯಕ್ತಪಡಿಸಿದ ಪ್ರತಿಯೊಬ್ಬರಿಗೂ ಮತ್ತು ಮಾಧ್ಯಮದವರಿಗೂ ಆಗೌರವ ತೋರಿದ್ದಾರೆ ಎಂದು ಭಾವಿಸಬೇಕಾಗುತ್ತದೆ.


ಜಯಪ್ರಕಾಶ ಗೌಡರು ತಕ್ಷಣ ತಮ್ಮ ಹೇಳಿಕೆಯನ್ನು ವಾಪಸ್ ಪಡೆದು ಹಾವೇರಿ ಮತ್ತು ಮಂಡ್ಯ ಸಮ್ಮೇಳನದ ಯಶಸ್ಸಿಗೆ ಶ್ರಮಿಸಿದ ಮತ್ತು ಭಾಗವಹಿಸಿದ ಪ್ರತಿಯೊಬ್ಬರನ್ನು ಅಭಿನಂದಿಸಿದರೆ ತಮ್ಮ ಘನತೆ ಮತ್ತು ಗೌರವ ಹೆಚ್ಚಾಗುತ್ತದೆ. ಇಲ್ಲವಾದರೆ ದಾವಣಗೆರೆ ಜಿಲ್ಲಾ ಮತ್ತು ಎಲ್ಲಾ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಪರವಾಗಿ ಮತ್ತು ಸಮಸ್ತ ಜಿಲ್ಲಾ ಕನ್ನಡದ ಅಭಿಮಾನಗಳ ಪರವಾಗಿ ಅವರ ಹೇಳಿಕೆಯನ್ನು ಖಂಡಿಸುತ್ತೇವೆ ಎಂದು ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ತಿಳಿಸಿದ್ದಾರೆ.

## ಸಿಂಗ್ ನಿಧನಕ್ಕೆ ಜಿ.ಎಂ ಸಿದ್ದೇಶ್ವರ ಸಂತಾಪ

ದಾವಣಗೆರೆ, ಡಿ.27- ಮಾಜಿ ಪ್ರಧಾನಿ ಮನಮೋಹನ್ ಸಿಂಗ್‌ರವರ ನಿಧನಕ್ಕೆ ಮಾಜಿ ಕೇಂದ್ರ ಸಚಿವ ಡಾ. ಜಿ.ಎಂ. ಸಿದ್ದೇಶ್ವರ ಸಂತಾಪ ವ್ಯಕ್ತ ಪಡಿಸಿದ್ದಾರೆ.

1991ರಲ್ಲಿ ರಾಜ್ಯಸಭೆಗೆ ಪ್ರವೇಶಿಸುವ ಮೂಲಕ ರಾಜಕೀಯ ಜೀವನ ಪ್ರಾರಂಭಿಸಿದ ಸಿಂಗ್ ಅವರು ಕೇವಲ 4 ತಿಂಗಳ ನಂತರ ಅಂದಿನ ಪ್ರಧಾನಿ ಪಿ.ವಿ. ನರಸಿಂಹರಾವ್ ಸರ್ಕಾರದಲ್ಲಿ ಹಣಕಾಸು ಸಚಿವರಾಗಿ ಭಾರತದ ಅರ್ಥಿಕತೆಯಲ್ಲಿ ಪರಿವರ್ತನೆಗೆ ಕಾರಣವಾಗಿದ್ದರು. ನಂತರ 2004 ರಿಂದ 2014ರವರೆಗೆ ಎರಡು ಅವಧಿಗೆ ಭಾರತದ ಪ್ರಧಾನಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರ ಅಗಲಿಕೆಯಿಂದಾಗಿ ದೇಶಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಸಿದ್ದೇಶ್ವರ ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

# ಭಾರತೀಯ ರಾಜಕೀಯದಲ್ಲಿ ಹೊಸ ಯುಗ ಸೃಷ್ಟಿಸಿದ ಹಕ್ಕು ಆಧಾರಿ ಕ್ರಾಂತಿ



**ಜಿಲ್ಲಾ ಕಾಂಗ್ರೆಸ್‌ನಿಂದ ಶ್ರದ್ಧಾಂಜಲಿ**

ದಾವಣಗೆರೆ, ಡಿ. 27 - ದೇಶದ ಅಪ್ರತಿಮ ಅರ್ಥಶಾಸ್ತ್ರಜ್ಞರೂ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ನಿಧನರಾದ ಹಿನ್ನೆಲೆಯಲ್ಲಿ ಇಂದು ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಮಹಾಪೌರ ಕೆ. ಚಮನ್ ಸಾಬ್ ಮಾತನಾಡಿ, ಭಾರತದ 14ನೇ ಪ್ರಧಾನ ಮಂತ್ರಿ ಡಾ. ಮನಮೋಹನ್ ಸಿಂಗ್ ಅವರು ಒಂದು ದಶಕದ ಅಸಾಧಾರಣ ಬೆಳವಣಿಗೆ ಮತ್ತು ಅಭಿವೃದ್ಧಿಯ ಅಧ್ಯಕ್ಷತೆ ವಹಿಸಿದ್ದರು. ಅವರ ಉಸ್ತುವಾರಿಯಲ್ಲಿ, ಭಾರತವು ತನ್ನ ಇತಿಹಾಸದಲ್ಲಿ ಅತ್ಯಧಿಕ ಬೆಳವಣಿಗೆ ದರವನ್ನು ಕಂಡಿತು, ಸರಾಸರಿ ಶೇ. 7.7 ರಷ್ಟು ಸುಮಾರು ಎರಡು ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಿ ಮಾರ್ಪಟ್ಟಿತು ಎಂದರು. 2014ರ ವೇಳೆಗೆ ಡಾ. ಸಿಂಗ್ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಗೆ ಅಧಿಕಾರ ವಹಿಸಿಕೊಂಡಾಗ ಲಕ್ಷಾಂತರ ಜನರ ಜೀವನ ಮಟ್ಟವನ್ನು ಹೆಚ್ಚಿಸುವ ಮೂಲಕ ಭಾರತವು ಹತ್ತನೇ ಸ್ಥಾನದಿಂದ ಹೊರಹೊಮ್ಮಿತು.

ಅವರ ಕಲ್ಪನೆಯ ತಿರುಳು ಕೇವಲ ಹೆಚ್ಚಿನ ಬೆಳವಣಿಗೆಯಲ್ಲ. ಆದರೆ ಅಂತರ್ಗತ ಬೆಳವಣಿಗೆ ಮತ್ತು ಎಲ್ಲಾ ದೋಣಿಗಳನ್ನು ಹೆಚ್ಚಿಸುವ ಉಬ್ಬರ ವಿಳಿತದ ನಂಬಿಕೆಯಾಗಿತ್ತು. ಈ ನಂಬಿಕೆಯು ನಾಗರಿಕರಿಗೆ ಆಹಾರದ ಕಾನೂನು ಹಕ್ಕು, ಶಿಕ್ಷಣದ ಹಕ್ಕು, ಕೆಲಸ ಮಾಡುವ ಹಕ್ಕು ಮತ್ತು ಮಾಹಿತಿ ಹಕ್ಕುಗಳನ್ನು ಖಾತ್ರಿ ಪಡಿಸುವ ಮಸೂದೆಗಳ ಅಂಗೀಕಾರದಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಡಾ. ಸಿಂಗ್ ಅವರ ಹಕ್ಕು ಆಧಾರಿತ ಕ್ರಾಂತಿಯು ಭಾರತೀಯ ರಾಜಕೀಯದಲ್ಲಿ ಹೊಸ ಯುಗವನ್ನು ಸೃಷ್ಟಿಸಿತು ಎಂದು ಹೇಳಿದರು

ಈ ಸಂದರ್ಭದಲ್ಲಿ ಒಂದು ನಿಮಿಷ ಮೌನಚರಣೆ ಮಾಡುವ ಮುಖಾಂತರ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಉಪ ಮಹಾಪೌರರಾದ ಸೋಗಿ ಶಾಂತಕುಮಾರ್ ಮಾತನಾಡಿ, ಡಾ. ಮನಮೋಹನ್ ಸಿಂಗ್ ಭಾರತವನ್ನು ಆರ್ಥಿಕ ಶಕ್ತಿ ಕೇಂದ್ರವಾಗಲು ಕಾರಣವಾದ ಅವರ ದೃಷ್ಟಿಗೆ ಅವರ ಕಠಿಣ ಪರಿಶ್ರಮ ಮತ್ತು ಅವರ ವಿನಮ್ರ, ಮೃದು-ಮಾತನಾಡುವ ವರ್ತನೆಗೆ ಹೆಸರುವಾಸಿಯಾಗಿದ್ದರು. ಅವರು ಭಾರತವನ್ನು ಮುಂದಕ್ಕೆ ಕೊಂಡೊಯ್ದ ಜಿಗಿತಗಳಿಗೆ ಮಾತ್ರವಲ್ಲದೆ ಚಿಂತನೆಯ ಮತ್ತು ಸಮಗ್ರತೆಯ ವ್ಯಕ್ತಿಯಾಗಿಯೂ ನೆನಪಿಸಿಕೊಳ್ಳುವ ಪ್ರಧಾನಿಯಾಗಿದ್ದಾರೆ. ಅವರ ನಿಧನದಿಂದ ಕಾಂಗ್ರೆಸ್ ಸಮಿತಿಗೆ ತುಂಬಲಾರದ ನಷ್ಟವಾಗಿದೆ ಎಂದು ಹೇಳಿದರು.

ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ ಮೀನಾಕ್ಷಿ ಜಗದೀಶ್ ಅವರು ಮಾತನಾಡಿ, ಡಾ. ಮನಮೋಹನ್ ಸಿಂಗ್ ಅವರು ಸೆ. 26, 1932 ರಂದು ಪಂಜಾಬ್‌ನಲ್ಲಿ ಜನಿಸಿದರು. ಅವರು 1952 ಮತ್ತು 1954 ರಲ್ಲಿ ಕ್ರಮವಾಗಿ ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಪಡೆದರು. ಅವರು 1957 ರಲ್ಲಿ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಿಂದ ತಮ್ಮ ಆರ್ಥಿಕ ಟ್ರಿಪೋಸ್ ಅನ್ನು ಪೂರ್ಣಗೊಳಿಸಿದರು. ಅವರು 1962 ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಿಂದ ಅರ್ಥಶಾಸ್ತ್ರದಲ್ಲಿ ಡಿ. ಫಿಲ್. ಅನ್ನು ಪಡೆದರು. ಇಂತಹ ಗಣ್ಯ ವ್ಯಕ್ತಿಗಳನ್ನು ಕಳೆದುಕೊಂಡಿರುವುದಕ್ಕೆ ಅವರ ಅಭಿಮಾನಿಗಳಿಗೆ, ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಎ. ನಾಗರಾಜ್, ಗಡಿಗುಡಾಳ್ ಮಂಜುನಾಥ್, ಎಸ್. ಮಲ್ಲಿಕಾರ್ಜುನ, ಜಾಕಿರ್ ಅಲಿ, ಸ್ಥಾಯಿ ಸಮಿತಿ ಅಧ್ಯಕ್ಷರಾದ ಸುಧಾ, ಇಟ್ಟಿಗುಡಿ, ಆಶಾ ಉಮೇಶ್, ಮೀನಾಕ್ಷಿ, ಜಗದೀಶ್, ಕೊಡಪಾನ್ ದಾದಾಪೀರ್, ನಾಮಿನಿ ಸದಸ್ಯರಾದ ರುದ್ರೇಶ್, ಡೋಲಿ ಚಂದ್ರು, ರಾಕೇಶ್, ಜಗದೀಶ್, ಕೇರಂ ಗಣೇಶ್, ಮನು, ಮೊಟ್ಟೆ ರೋಷನ್, ದಾದಾಪೀರ್, ಕಲ್ಪತರು ಶ್ರೀನಿವಾಸ್, ಅಕ್ಬರ್ ಭಾಷಾ, ಫಯಾಜ್ ಅಹ್ಮದ್, ಚೇತನ್ ಕುಮಾರ್, ಯುವರಾಜ್, ರಾಧಾಬಾಯಿ, ದ್ರಾಕ್ಷಾಯಿಣಮ್ಮ, ರಾಜೇಶ್ವರಿ, ಕಾವೇರಿ, ರಾಜ್ ಕಾವ್ಯ, ಸಂಗೀತ, ಸುಧಾ, ಉಮಾದೇವಿ, ಎಂ. ಸುಮಿತ್ರಾ, ಲೋಕೇಶ್ ಇನ್ನು ಮುಂತಾದವರು ಇದ್ದರು.

# ಯುಜಿಡಿ ವರ್ಕರ್ಸ್‌ಗಳಿಗೆ ಕಿಟ್ ವಿತರಣೆ



ದಾವಣಗೆರೆ, ಡಿ. 27- ಮಹಾನಗರ ಪಾಲಿಕೆ ವತಿಯಿಂದ ಒಳಚರಂಡಿ ಸಹಾಯಕರು, ವಾಹನ ಚಾಲಕರು, ಸುರಕ್ಷತಾ ಪರಿಕರಗಳನ್ನು ಬಳಸುವುದಕ್ಕೆ ತರಬೇತಿ ಶಿಬಿರ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಯುಜಿಡಿ ವರ್ಕರ್ಸ್‌ಗಳಿಗೆ ಕಿಟ್ ವಿತರಣೆ ಮಾಡಲಾಯಿತು

ಕಾರ್ಯಕ್ರಮದಲ್ಲಿ ಉಪ ಮೇಯರ್ ಸೋಗಿ ಶಾಂತಕುಮಾರ್, ಆಯುಕ್ತರಾದ ರೇಣುಕಾ, ಸ್ಥಾಯಿ ಸಮಿತಿ ಅಧ್ಯಕ್ಷರಾದ ಸವಿತಾ ಹುಲ್ಲುಮನೆ ಗಣೇಶ್, ಆಶಾ ಉಮೇಶ್, ಸುಧಾ ಇಟ್ಟಿಗುಡಿ, ಪಾಲಿಕೆ ಸದಸ್ಯರಾದ ಮೀನಾಕ್ಷಿ ಜಗದೇಶ್, ಪ್ರಸನ್ನ, ಎ. ನಾಗರಾಜ್, ಎಸ್.ಟಿ. ವೀರೇಶ್, ವೀರೇಶ್ ಪೈಲ್ವಾನ್, ವೀಣಾ ನಂಜಣ್ಣ, ಮುಖಂಡರದ ಗಣೇಶ್ ಹುಲ್ಲುಮನೆ, ಉಮೇಶ್ ಹಾಗೂ ಪಾಲಿಕೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಹರಿಹರ : ರೂಪಾ ಹಿರೆಬಿದರಿಗೆ ದ್ವಿತೀಯ ಸ್ಥಾನ



ಹರಿಹರ, ಡಿ. 27 - ನಗರದ ಶ್ರೀಮತಿ ಗಿರಿಯಮ್ಮ ಆರ್. ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯದ ರೂಪಾ ಎಚ್. ಹಿರೇಬಿದರಿ 110 ಮೀಟರ್ ಅಡೆ ತಡೆ ಓಟದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಚಿತ್ರದುರ್ಗದ ಒನಕೆ ಓಬವ್ವ ಕ್ರೀಡಾಂಗಣದಲ್ಲಿ ದಾವಣಗೆರೆ ವಿಶ್ವ ವಿದ್ಯಾಲಯದ 13ನೇ ಅಥ್ಲೆಟಿಕ್ಸ್ ಕೂಟದ 110 ಮೀಟರ್ ಅಡೆ ತಡೆಯ ಓಟದಲ್ಲಿ ಭಾಗವಹಿಸಿ, ದ್ವಿತೀಯ ಸ್ಥಾನ ಪಡೆದಿದ್ದಾರೆ. ಇವರನ್ನು ಮಹಾವಿದ್ಯಾಲಯದ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ ಗೌರವಿಸಿ, ಸನ್ಮಾನಿಸಿ, ಅಭಿನಂದಿಸಿದರು.

ಈ ಸಂದರ್ಭದಲ್ಲಿ ಕಾಲೇಜು ಆಡಳಿತ ಮಂಡಳಿಯ ನಿರ್ದೇಶಕ ಆರ್.ವಿ. ಬಲರಾಮಶ್ರೇಷ್ಠಿ, ಕೆ.ಎಂ. ರವಿಕುಮಾರ್, ಸತ್ಯನಾರಾಯಣ, ಪ್ರಸನ್ನಕುಮಾರ್, ಪ್ರಾಚಾರ್ಯ ಟಿ.ಡಿ. ಸುಜಾತ, ಉಪನ್ಯಾಸಕ ಗುರುಬಸವರಾಜ್ ಮತ್ತು ಇತರರು ಉಪಸ್ಥಿತರಿದ್ದರು.

# ಆತ್ಮ ವಿಶ್ವಾಸ, ನಿರಂತರ ಶ್ರಮದಿಂದ ಸಾಧನೆ

## ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜು ಕಾರ್ಯಕ್ರಮದಲ್ಲಿ ಡಾ.ಎ.ಅಸೀಫುಲ್ಲಾ



ದಾವಣಗೆರೆ, ಡಿ. 27 - ಸ್ವಅರಿವು, ಆತ್ಮ ವಿಶ್ವಾಸ ಇದ್ದು, ನಿರಂತರ ಶ್ರಮವಿದ್ದರೆ ಸಾಧನೆಗಳು ನಿಮ್ಮ ಜೊತೆ ಇರುತ್ತವೆ ಎಂದು ದಾವಿವಿ ನಿರ್ವಹಣಾ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಎ. ಅಸೀಫುಲ್ಲಾ ಹೇಳಿದರು.

ನಗರದ ಗುರುಬಕ್ಕೇಶ್ವರ ಕಲ್ಯಾಣ ಮಂಟಪ ದಲ್ಲಿ ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜಿನ 2024-25ನೇ ಸಾಲಿನ ವಿದ್ಯಾರ್ಥಿ ಸಂಘ, ಸಾಂಸ್ಕೃತಿಕ, ಕ್ರೀಡಾ, ಎನ್‌ಎಸ್‌ಎಸ್ ಘಟಕ, ಯುವ ರೆಡ್‌ಕ್ರಾಸ್ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಡಿಮೆ ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಕಾಲೇಜು, ಈಗ ವಿದ್ಯಾರ್ಥಿಗಳು ಒಂದು ಸಾವಿರಕ್ಕಿಂತ ಹೆಚ್ಚಾಗಿರುವುದು ಕಾಲೇಜಿನ ಅಭಿವೃದ್ಧಿಯ ಪಥವನ್ನು ತೋರಿಸುತ್ತದೆ ಎಂದು ಮೆಚ್ಚುಗೆ ಸೂಚಿಸಿದರು.

ನಾವು ಕಾಲೇಜಿನಲ್ಲಿ ಓದುತ್ತಿದ್ದಾಗ ಪಠ್ಯೇತರ ಚಟುವಟಿಕೆಗಳಿಗೂ ಅಷ್ಟೇ ಮಹತ್ವ ಕೊಟ್ಟು ಕಾಲೇಜು ನಮ್ಮನ್ನು ಬೆಳೆಸಿತು. ಹಾಗಾಗಿಯೇ ಇಂದು ನಾನು ಉನ್ನತ ಹುದ್ದೆಯಲ್ಲಿದ್ದೇನೆ. ಕರ್ನಾಟಕದಲ್ಲಿ ಎಲ್ಲಾ ಸಂಪನ್ಮೂಲ ಇವೆ. ಸರಿಯಾಗಿ ಬಳಸಿಕೊಳ್ಳುವ ಪ್ರತಿಭೆಗಳು ಬೇಕು. ಕಂಪನಿಗಳು ಉದ್ಯೋಗದಾತರಿಂದ ಏನನ್ನು ನಿರೀಕ್ಷಿಸುತ್ತಾರೆ ಎಂಬುದನ್ನು ಅರ್ಥಮಾಡಿಕೊಂಡು ಕಲಿಯಬೇಕು ಎಂದು ತಿಳಿಸಿದರು.

ಶಿಕ್ಷಣದಲ್ಲಿ ಆಸಕ್ತಿಯನ್ನು ಇಟ್ಟುಕೊಳ್ಳಿ. ಅದಕ್ಕೆ ತಕ್ಕಂತಹ ಫಲವೂ ನಿಮಗೆ ಸಿಗುತ್ತದೆ. ಪದವಿಗಳು ಹೆಚ್ಚು ಕೌಶಲ್ಯವನ್ನು ನಿರೀಕ್ಷಿಸುತ್ತವೆ. ನಿಮ್ಮ ಶಿಸ್ತು ನಡವಳಿಕೆಗಳು ನಿಮ್ಮ ಸ್ಥಾನಮಾನವನ್ನು ಹೆಚ್ಚಿಸುತ್ತವೆ. ಹಾಗಿದ್ದಲ್ಲಿ ಮಾತ್ರ ನೀವು ಎಲ್ಲೆಡೆಯೂ ಗೌರವಕ್ಕೆ ಒಳಗಾಗುತ್ತೀರಿ. ಕ್ರಿಯಾತ್ಮಕ ಚಿಂತನೆಗಳು ನಿಮ್ಮಲ್ಲಿ ಇರಲಿ ಎಂದು ಕಿವಿಮಾತು ಹೇಳಿದರು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಅಧ್ಯಕ್ಷ ಬಿ.ಸಿ. ಶಿವಕುಮಾರ್, ಎಸ್‌ಬಿಸಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯ ಡಾ. ಕೆ. ಷಣ್ಮುಖ, ಕಾಲೇಜಿನ ಪ್ರಾಚಾರ್ಯ ಎಂ.ಸಿ. ಗುರು, ಪಿಇಎಸ್ ಶಾಲೆ ಅಧ್ಯಕ್ಷ ಆರ್. ವೆಂಕಟರೆಡ್ಡಿ, ಅಥಣಿ ಸಂಯುಕ್ತ ಪ.ಪೂ. ಕಾಲೇಜಿನ ಪ್ರಾಚಾರ್ಯೆ ಡಯನಾ ದಿವ್ಯ, ಉಪನ್ಯಾಸಕರು, ಪೋಷಕರು, ವಿದ್ಯಾರ್ಥಿಗಳು ಬಾಗವಹಿಸಿದ್ದರು.

ಈ ವೇಳೆ ನವದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪಥಸಂಚಲನಕ್ಕೆ ಆಯ್ಕೆಯಾದ ಕಾಲೇಜಿನ ಡಿ.ಯು. ಪಲ್ಲವಿಯವರನ್ನು ಸನ್ಮಾನಿಸಲಾಯಿತು. ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

# ಹಿಂದು ಧರ್ಮದಲ್ಲಿ ಮಹಿಳೆಗೆ ಗೌರವ ಸ್ಥಾನ




**ಸಂಗೀತ ಸಿಂಚನ :** ಶ್ರೀ ಮಾಧ್ವ ಯುವಕ ಸಂಘದ 44ನೇ ವಾರ್ಷಿಕೋತ್ಸವ ಅಂಗವಾಗಿ ಉದಯೋನ್ಮುಖ ಗಾಯಕಿ ಸಮ್ಮಿತಾ ಮುತಾಲಿಕ್ ಅವರಿಂದ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿತ್ತು. ಯಮನ್ ರಾಗದೊಂದಿಗೆ ತಮ್ಮ ಕಛೇರಿಯನ್ನು ಆರಂಭಿಸಿದ ಅವರು ಸಂಗೀತ ಸುಧೆಯನ್ನು ಉಣಬಡಿಸಿದರು. ಆನಂದ ಪಾಟೀಲ್ ಮತ್ತು ತಂಡದವರು ಸಾಥ್ ನೀಡಿದರು.

ದಾವಣಗೆರೆ, ಡಿ. 27 - ಹಿಂದು ಧರ್ಮದಲ್ಲಿ ಸ್ತ್ರೀಯರಿಗೆ ಗೌರವದ ಸ್ಥಾನವಿದೆ ಎಂದು ವೇದ ಪಂಡಿತ ನರಹರಿ ಆಚಾರ್ಯ ಮುತ್ತಗಿ ಹೇಳಿದರು.

ನಗರದ ಲಾಯರ್ ರಸ್ತೆಯ ಸರ್ವಜ್ಞಾಚಾರ್ಯ ಸಂಘದಲ್ಲಿ ನಡೆದ ಶ್ರೀ ಮಾಧ್ವ ಯುವಕ ಸಂಘದ 44ನೇ ವಾರ್ಷಿಕೋತ್ಸವ 'ಸಮಾಜಕ್ಕೆ ರಾಮಾಯಣದ ಕೊಡುಗೆ' ವಿಷಯದ ಕುರಿತು ಪ್ರವಚನ ನೀಡಿದರು.

ಹಿಂದು ಧರ್ಮವು ಮಹಿಳೆಯರನ್ನು ಎಂದಿಗೂ ದೂಷಣೆ ಮಾಡಿಲ್ಲ. ಸಮಾನ ಸ್ಥಾನವನ್ನೇ ನೀಡಿದೆ. ಲಂಕಾ ದಹನದ ಸಂದರ್ಭದಲ್ಲಿ ರಾಮ ದೇವರ ಭಕ್ತ ಹನುಮಂತ ಇದನ್ನು ನಿರೂಪಿಸಿದ್ದಾರೆ ಎಂದು ರಾಮಾಯಣದ ಆ ಸಂದರ್ಭವನ್ನು ವಿವರಿಸಿದರು.

ರಾಮಾಯಣದಲ್ಲಿ ಬರುವ ಆಂಜನೇಯನ ಪಾತ್ರ, ಸೀತೆಯನ್ನು ಹುಡುಕಲು ಹನುಮಂತ ದೇವರು ಲಂಕೆಗೆ ಹಾರಿದ್ದು, ಆ ನಗರವನ್ನು ದಹಿಸಿದ್ದು, ಸೀತಾ ದೇವಿಯನ್ನು ಭೇಟಿಯಾಗಿ ಶ್ರೀರಾಮ ಚಂದ್ರನ ಸಂದೇಶವನ್ನು ತಲುಪಿಸಿದ್ದನ್ನು ವಿವರಿಸಿದರು.



ನರಹರಿ ಆಚಾರ್ಯ ಮುತ್ತಿಗೆ

ನಾವು ಧರ್ಮದ ರಕ್ಷಣೆ ಮಾಡಿದಾಗ ಧರ್ಮವು ನಮ್ಮನ್ನು ರಕ್ಷಿಸುತ್ತದೆ. ಗುರುಗಳ ಆಜ್ಞೆಯನ್ನು ಪರಿಪಾಲಿಸಬೇಕು. ದೊಡ್ಡವರ ಮಾತಿಗೆ ವಿರುದ್ಧವಾಗಿ ನಡೆದುಕೊಳ್ಳಬಾರದು ಎಂದು ತಿಳಿಸಿದರು.

ಪ್ರಸ್ತುತ ಸಂದರ್ಭದಲ್ಲಿ ನಮ್ಮ ಸನಾತನ ಧರ್ಮವನ್ನು ಉಳಿಸಿಕೊಳ್ಳಬೇಕಿದೆ. ಮಕ್ಕಳಲ್ಲಿ ಆ ಸಂಸ್ಕಾರವನ್ನು ಬೆಳೆಸಬೇಕಿದೆ. ಪ್ರತಿಯೊಂದು ವಿಷಯದಲ್ಲೂ ಮಕ್ಕಳು ನಮ್ಮನ್ನು ಅನುಕರಿಸುತ್ತಾರೆ. ನಮ್ಮ ಪರಂಪರೆಯನ್ನು ನಾವು ಕಾಪಾಡಿದರೆ ಮಕ್ಕಳು ಅದನ್ನು ಮುಂದುವರಿಸುತ್ತಾರೆ. ನಮ್ಮ ಧರ್ಮದ ಶ್ರೇಷ್ಠತೆ ಕಾಪಾಡಬೇಕು. ನಮ್ಮ ವೇಷ ಭೂಷಣ, ನಡವಳಿಕೆಗಳು ಧರ್ಮದ ಘನತೆಯನ್ನು ಕಾಪಾಡುವಂತಿರಬೇಕು ಎಂದು ಹೇಳಿದರು.

ನಾವು ಭಗವಂತನ ನಾಮ ಸ್ಮರಣೆ ಮಾಡಬೇಕು. ನಮ್ಮ ಸತ್ಕರ್ಮಗಳ ಮೂಲಕ ದೇವರ ಅನುಗ್ರಹಕ್ಕೆ ಪಾತ್ರವಾಗಬೇಕು ಎಂದು ತಿಳಿಸಿದರು. ಪಂಡಿತ ಗೋಪಾಲಾಚಾರ್ ಮಣ್ಣೂರು, ಕೃಷ್ಣಾಚಾರ್ಯ ಮಣ್ಣೂರು ಇದ್ದರು.

# ಬದುಕಿನ ವೈರುಧ್ಯ



ಜಗತ್ತು ನಾಗಲೋಟದಿಂದ ಓಡುತ್ತಿದೆ. ಹೊಸ ಹೊಸ ಪರಿಕರಗಳು ಜನರ ಜೀವನ ಶೈಲಿಯನ್ನು ಮಾರ್ಪಡಿಸಿವೆ. ಆಧುನಿಕತೆಯ ಹೆಸರಿನಲ್ಲಿ ಪರಿಸರ ನಾಶವಾಗುವ ದಿನಗಳು ದೂರವಿಲ್ಲ. ಪ್ರಸ್ತುತ ಜಗತ್ತು ಅಂತರ್ಜಾಲದಿಂದ ನಿಯಂತ್ರಿತ. ಅಪ್ಪ-ಅಮ್ಮನ್ನನ್ನು ಬಿಟ್ಟು ಎಲ್ಲವೂ ಆನ್‌ಲೈನ್‌ನಲ್ಲಿ ಲಭ್ಯ. ತಿಂಡಿಯಿಂದ ಹಿಡಿದು ಎಲೆಕ್ಟ್ರಾನಿಕ್ ಉಪಕರಣಗಳವರೆಗೆ ವಸ್ತುಗಳನ್ನು ಬೆರಳ ತುದಿಯನ್ನು ಮೊಬೈಲ್‌ನಲ್ಲಿ ಆಡಿಸುವ ಮೂಲಕ ತರಿಸಿಕೊಳ್ಳಬಹುದು. ಅಸಂಖ್ಯ ವಸ್ತುಗಳು ದಿನವೂ ವಿಲೇವಾರಿ ಆಗುತ್ತವೆ. ಆನ್‌ಲೈನ್‌ನಲ್ಲಿ ಆರ್ಡರ್ ಮಾಡುವ ವಸ್ತುಗಳನ್ನು ಸರಿಯಾದ ವಿಳಾಸಕ್ಕೆ ತಲುಪಿಸಲು ಡೆಲಿವರಿ ಬಾಯ್ಸ್ ಇರುತ್ತಾರೆ. ತಮ್ಮ ದ್ವಿಚಕ್ರ ವಾಹನದಲ್ಲಿ ಕುಳಿತು ಬೆನ್ನಮೇಲೆ ದೊಡ್ಡದಾದ ವಸ್ತುಗಳಿಂದ ತುಂಬಿರುವ ಚೀಲ ಕಾಣುತ್ತದೆ. ಜೀವನೋಪಾಯಕ್ಕಾಗಿ ದೊಡ್ಡ ದೊಡ್ಡ ಚೀಲ ಹೊರುತ್ತಾ ರಸ್ತೆ ರಸ್ತೆಯಲ್ಲಿ ತಿರುಗುವ ಡೆಲಿವರಿ ಬಾಯ್ಸ್ ಕಾಣಸಿಗುತ್ತಾರೆ.

ಆನ್‌ಲೈನ್‌ನಲ್ಲಿ ಖರೀದಿಸಿದ ವಸ್ತುಗಳನ್ನು ಸುರಕ್ಷಿತವಾಗಿಡಲು ದೊಡ್ಡ, ದೊಡ್ಡ ಡಬ್ಬಗಳು ಮತ್ತು ಥರ್ಮಕೋಲ್ ಬಾಕ್ಸ್‌ಗಳನ್ನು ಬಳಸಲಾಗುತ್ತದೆ. ಇವೆಲ್ಲಾ ನಂತರ ಕಸದ ಬುಟ್ಟಿಗೆ ಸೇರುತ್ತವೆ ಅಥವಾ ಬೀದಿಗೆ ಬೀಳುತ್ತವೆ. ಇಂತಹ ಕಸವನ್ನು ಹೆಕ್ಕಿ ತಮ್ಮ ಬೆನ್ನ ಮೇಲಿನ ದೊಡ್ಡ ಚೀಲದಲ್ಲಿ ತುಂಬಿ, ಮಾರಿ ಜೀವಿಸುವ ಹೆಂಗೆಳೆಯರ ಗುಂಪೇ ಇದೇ. ಬೆಳ್ಳಂಬೆಳಿಗ್ಗೆ ಈ ಹೆಣ್ಣುಮಕ್ಕಳು ರಸ್ತೆಗಿಳಿದು ಅಲ್ಲಲ್ಲಿ ಬಿದ್ದ ಪ್ಲಾಸ್ಟಿಕ್ ಬಾಟಲಿಗಳು ಮತ್ತು ಇತರೆ ಮರು ಉಪಯೋಗವಾಗುವ ವಸ್ತುಗಳನ್ನು ಆಯುತ್ತಾ ಬೀದಿ ಬೀದಿ ತಿರುಗುತ್ತಾ ತಮ್ಮ ಬದುಕಿನ ಬಂಡಿಯನ್ನು ಎಳೆಯುತ್ತಾರೆ. ಒಂದೆಡೆ ಹೊಸ ವಸ್ತುಗಳನ್ನು ಹಂಚುತ್ತಾ ತಿರುಗುವ ಜೀವನವಾದರೆ, ಇನ್ನೊಂದೆಡೆ ಕಸದಿಂದ ಜೀವನ ನಡೆಸುವ ಜನರು ಒಂದೇ ಕ್ಯಾಮರಾ ಚೌಕಟ್ಟಿನಲ್ಲಿ ಸಿಕ್ಕಿದ್ದು ಬದುಕಿನ ವೈರುಧ್ಯವಲ್ಲವೇ? ಒಂದರಿಂದ ಪರಿಸರ ಮಾಲಿನ್ಯ ಮತ್ತೊಂದರಿಂದ ಪರಿಸರ ಶುಚಿತ್ವ.

**- ಡಾ. ಎಸ್. ಶಿಶುಪಾಲ,** ಪ್ರಾಧ್ಯಾಪಕರು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ






## ಅಣಜಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ರಾಜ್‌ಕುಮಾರ್ ಆಯ್ಕೆ



ದಾವಣಗೆರೆ, ಡಿ. 27- ತಾಲ್ಲೂಕಿನ ಅಣಜಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕೆ. ರಾಜ್‌ಕುಮಾರ್ ಮೆಳ್ಳೇಕಟ್ಟೆ ಹಾಗೂ ಉಪಾಧ್ಯಕ್ಷರಾಗಿ ಬಿ. ನಾಗೇಂದ್ರಪ್ಪ ಅಣಜಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಕಾನೂನು ಕಾಲೇಜ್ ತಂಡಕ್ಕೆ 4ನೇ ಸ್ಥಾನ



ದಾವಣಗೆರೆ, ಡಿ. 27 - ತುಮಕೂರಿನ ವಿದ್ಯೋದಯ ಕಾನೂನು ಕಾಲೇಜಿನಲ್ಲಿ ಹುಬ್ಬಳ್ಳಿ ಕರ್ನಾಟಕ ರಾಜ್ಯ ಕಾನೂನು ವಿಶ್ವ ವಿದ್ಯಾಲಯ ವತಿಯಿಂದ ಆಯೋಜಿಸಲಾಗಿದ್ದ ಅಂತರ್ ಮಹಾವಿದ್ಯಾಲಯಗಳ ಯೋಗ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ನಗರದ ಆರ್. ಎಲ್. ಲಾ ಕಾಲೇಜು ತಂಡಕ್ಕೆ ನಾಲ್ಕನೇ ಸ್ಥಾನ ಲಭಿಸಿದೆ. ಎಸ್.ಎಸ್. ಫಿಟ್‌ನೆಸ್ ಅಂಡ್ ಯೋಗ ಸ್ಪೋರ್ಟ್ಸ್‌ನ ಡಿ.ಸಂತೋಷ್ ಈ ತಂಡದ ತರಬೇತುದಾರರಾಗಿದ್ದರು.

## ಶಾಮನೂರಿನಲ್ಲಿ ನಾಳೆ ವರಭೀರಲಿಂಗೇಶ್ವರ ದೇವರ ಕಾರ್ತಿಕ



ದಾವಣಗೆರೆ, ಡಿ.27- ಶಾಮನೂರಿನ ಶಿರಮಗೊಂಡನಹಳ್ಳಿ ರಸ್ತೆಯ ಶಿವ-ಪಾರ್ವತಿ ಬಡಾವಣೆಯಲ್ಲಿರುವ ಶ್ರೀ ವರಭೀರಲಿಂಗೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 29ರ ಭಾನುವಾರ ಸಂಜೆ 6.30ಕ್ಕೆ ಕಾರ್ತಿಕ ದೀಪೋತ್ಸವ ನಡೆಯಲಿದೆ.

## 30ರಂದು ಅಮವಾಸ್ಯೆ : ದಾನಮ್ಮ ದೇವಿ ದೇವಸ್ಥಾನದಲ್ಲಿ ರುದ್ರಾಭಿಷೇಕ, ಅಲಂಕಾರ



ದಾವಣಗೆರೆ, ಡಿ. 27- ನಗರದ ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ಹಾಗೂ ಗುಡ್ಡಾಪುರದ ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ಎಳ್ಳ ಅಮಾವಾಸ್ಯೆ ಪ್ರಯುಕ್ತ 30ರ ಸೋಮವಾರ ಬೆಳಿಗ್ಗೆ ರುದ್ರಾಭಿಷೇಕ, ಮಧ್ಯಾಹ್ನ ಅಲಂಕಾರ ಪೂಜೆ ನಡೆಯುವುದು. ನಂತರ ದಾಸೋಹ ಏರ್ಪಡಿಸಲಾಗಿದೆ. ಹರಿಹರ ಟಿ. ಜಯದೇವಪ್ಪ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಇವರು ದಾಸೋಹ ಸೇವೆ ಏರ್ಪಡಿಸಿದ್ದಾರೆ.

## ಭದ್ರಾ ಫುಡ್ ಫೆಸ್ಟ್ ಮುಂದೂಡಿಕೆ

ದಾವಣಗೆರೆ, ಡಿ. 27- ನಗರದ ಭದ್ರಾ ಶಿಕ್ಷಣ ಸಂಸ್ಥೆಯಿಂದ ನಾಳೆ ದಿನಾಂಕ 28ರ ಶನಿವಾರ ನಡೆಯಬೇಕಿದ್ದ ಭದ್ರಾ ಫುಡ್ ಫೆಸ್ಟ್ -2024 ಅನ್ನು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ನಿಧನದ ನಿಮಿತ್ತ ಮುಂದೂಡಲಾಗಿದೆ. ಕಾರ್ಯಕ್ರಮವನ್ನು ಬರುವ ಜನವರಿ 7 ರಂದು ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ನಡೆಸಲು ಭದ್ರಾ ಶಿಕ್ಷಣ ಸಂಸ್ಥೆಯು ವಿದ್ಯಾರ್ಥಿ ಸಮೂಹದಲ್ಲಿ ತೀರ್ಮಾನಿಸಿದೆ.


REQUIRED

* Sales Man -10 (10th fail/Pass)
* Programming & Website Management
* BCA - 06 * MCA - 04

Contact :

Optical Paradise


MMK Complex, AVK College Road,Davangere-2.

Contact : 88614 29090









KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas